ಸಂಪುಟ : 8 ಸಂಚಿಕೆ : 279 ಪುಟ : 4 ಬೆಲೆ : 3.00 ಶನಿವಾರ ಡಿಸೆಂಬರ್ 16, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 279 Pages : 4 Price : 3.00 Saturday December 16, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಡಿಸೆಂಬರ್ 16 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 15,16,17 ಶಹಪೂರ ಪೇಟೆ, ಡಿಸಿ ಮಿಲ್ ರೋಡ್, ಮೀನಿನ ಮಾರ್ಕೆಟ್, ಮಹೇಂದ್ರಕರ್ ಸರ್ಕಲ್, ಜವಳಗಲ್ಲಿ, ಭಜಂತ್ರಿ ಓಣಿ, ಪರಪೂರ ಲೈನ್, ಕರ್ನಾಟಕ ಟಾಕೀಸ್ ಲೈನ್, ಗಾಂಧಿ ಸರ್ಕಲ್ ಲೈನ್, ಅಂಗನವಾಡಿ ಲೈನ್, ಬಸವೇಶ್ವರ ಗುಡಿ ಲೈನ್, ಗಣೇಶ ಗುಡಿ ಲೈನ್.

ವಾರ್ಡ್ ನಂ. 27, 28 ಸ್ಟೇಡಿಯಂ ಕುರುಡಗಿ ದವಾಖಾನೆ ಲೈನ್, ಸಜ್ಜನ ಕುಲಕರ್ಣಿ ಲೈನ್, ನಂದೀಶ್ವರ ಮಠದ ಹಿಂದಿನ ಭಾಗ, ಹೊಸಮನಿಯವರ ಲೈನ್, ರೊಟ್ಟಿ ಲೇಔಟ್, ಮಠದ ಲೈನ್, ತುಪ್ಪದ ಮಾಸ್ತರ್ ಲೈನ್, ಜಿಎಸ್ ಪಾಟೀಲರ ಲೈನ್, ನಾಗರಕಟ್ಟಿ ಲೈನ್, ವಾರ್ಡ್ ನಂ. 6 ಮಾಕಾಪುರ ಲೈನ್, ನಾವಳ್ಳಿಯವರ ಲೈನ್. ವಾರ್ಡ್ ನಂ. 30 ಪಾಶಿಯವರ ಲೈನ್, ಕೇಶವ ನಗರ, ಸಂಕಣ್ಣ ವರ ಲೇಔಟ್, ರೋಣದವರ ಲೈನ್. ವಾರ್ಡ್ ನಂ. 27 ನಂದೀಶ್ವರ ಮಠದ ಹಿಂದಿನ ಭಾಗ, ಮರಾಠಿ ಮಾಸ್ತರ ಲೈನ್, ಧರ್ಮಚಾರ್ಯ ಲೈನ್, ಮಾಳಗೊಂಡರವರ ಲೈನ್, ಹುದ್ದಾರ ಮಾಸ್ತರ ಲೈನ್, ಲಖಾನಿಯವರ ಲೈನ್.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ಅವುಗಳನ್ನು ದೃಶ್ಯ ಮಾಧ್ಯಮ ಹಾಗೂ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಕರವನ್ನು ಸಂದಾಯ ಮಾಡಿ ಸಹಕರಿಸಲು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿದ್ಯುನ್ಮಾನ ಮತಯಂತ್ರದ ಪ್ರಾತ್ಯಕ್ಷಿಕೆಗೆ ಚಾಲನೆ ನೀಡಿದ ಜಿಲ್ಲಾ ಚುನಾವಣಾಧಿಕಾರಿ ವೈಶಾಲಿ ಎಂ.ಎಲ್.

# ಭಯ, ನಿಷ್ಕಾಳಜಿ ತೊರೆದು ಹಕ್ಕು ಚಲಾಯಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರತಿಯೊಬ್ಬ ಅರ್ಹ ಮತದಾರರು ತಮ್ಮ ಮತದಾನ ಪ್ರಕ್ರಿಯೆಯ ಕುರಿತು, ವಿದ್ಯುನ್ಮಾನ ಮತಯಂತ್ರದ ಪ್ರಾತ್ಯಕ್ಷಿಕೆಯನ್ನು ಅರಿಯಬೇಕು. ಚುನಾವಣೆಯ ಮತದಾನದ ದಿನದಂದು ಸರಿಯಾಗಿ ಮತ ಚಲಾಯಿಸುವ ಮೂಲಕ ಸುಭದ್ರ ಸರ್ಕಾರ ನಿರ್ಮಾಣಕ್ಕೆ ಕೈಜೋಡಿಸಬೇಕೆಂದು ಜಿಲ್ಲಾ ಚುನಾವಣಾಧಿಕಾರಿ ವೈಶಾಲಿ ಎಂ.ಎಲ್. ಸಾರ್ವಜನಿಕರಿಗೆ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸ್ವೀಪ್ ಸಮಿತಿಯಿಂದ ಮುಂಬರುವ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಗದಗ ಜಿಲ್ಲೆಯಾದ್ಯಂತ ವಿದ್ಯುನ್ಮಾನ ಮತಯಂತ್ರ ಪ್ರಾತ್ಯಕ್ಷಿಕೆ ಮೂಲಕ ಮತದಾರರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಕ್ಕೆ ಶುಕ್ರವಾರ




ಜಿಲ್ಲಾಡಳಿತ ಭವನದಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯುನ್ಮಾನ ಮತಯಂತ್ರದಲ್ಲಿ ಮತದಾನ ಮಾಡಿದ ನಂತರ ಅರ್ಹ ಮತದಾರರು ಚಲಾಯಿಸುವ ಮತವು ಚಲಾಯಿಸಿದ ಪಕ್ಷ ಅಥವಾ ವ್ಯಕ್ತಿಗೆ ದಾಖಲಾದ ಬಗ್ಗೆ ಖಾತರಿಪಡಿಸಿಕೊಳ್ಳಲು ವಿ.ವಿ ಪ್ಯಾಟ್ ಯಂತ್ರ ಸಹಕಾರಿಯಾಗಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ವಿದ್ಯುನ್ಮಾನ ಮತಯಂತ್ರದ ಮೂಲಕ ಮತ ಚಲಾಯಿಸಲು ಅನುಕೂಲವಾಗುವಂತೆ ಸಾರ್ವಜನಿಕರಿಗೆ ಪ್ರಾತ್ಯಕ್ಷಿಕೆ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದ ಜಿಲ್ಲಾ ಚುನಾವಣಾಧಿಕಾರಿಗಳು, ವಿದ್ಯುನ್ಮಾನ ಮತಯಂತ್ರದ ಬಳಕೆಯ ಪ್ರತಿ ಹಂತಗಳನ್ನು ವಿವರಿಸಿ ಪ್ರಾತ್ಯಕ್ಷಿಕೆಯನ್ನು ಸಾದರಪಡಿಸಿದರು. ಮತಯಂತ್ರ, ಕಂಟ್ರೋಲಿಂಗ್ ಯುನಿಟ್ ಹಾಗೂ ವಿ.ವಿ ಪ್ಯಾಟ್‌ಗಳ ಕಾರ್ಯ ಹಾಗೂ ಮತ ಚಲಾಯಿಸುವ ಪ್ರಕ್ರಿಯೆಯನ್ನು ಸಾರ್ವಜನಿಕರು ವೀಕ್ಷಿಸಿದರು.

▸▸3ನೇ ಪುಟಕ್ಕೆ

## ನಾಳೆ ಸಿಎಂ ಸಿದ್ದರಾಮಯ್ಯ ಗದುಗಿಗೆ

■ವಿಜಯಸಾಕ್ಷಿ ಸುದ್ದಿ, ಗದಗ



ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.17ರಂದು ಬೆಳಿಗ್ಗೆ 10.30 ಗಂಟೆಗೆ ಹುಬ್ಬಳ್ಳಿಯಿಂದ ಹೆಲಿಕಾಪ್ಟರ್ ಮೂಲಕ ಹೊರಟು, ಬೆ.10.45 ಗಂಟೆಗೆ ಗದಗ ಜಿಲ್ಲಾಧಿಕಾರಿಗಳ ಕಚೇರಿ ಆವರಣಕ್ಕೆ ಆಗಮಿಸಿ, ನಗರದಲ್ಲಿ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ನಂತರ ಬೆಳಿಗ್ಗೆ 11.45ಕ್ಕೆ ಗದುಗಿನಿಂದ ಹುಬ್ಬಳ್ಳಿಗೆ ಹೆಲಿಕಾಪ್ಟರ್ ಮುಖಾಂತರ ಪ್ರಯಾಣ ಬೆಳೆಸುವರು ಎಂದು ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

### ವಿಧಾನ ಪರಿಷತ್ ಅಧಿವೇಶನದಲ್ಲಿ ಕಾನೂನು ಸಚಿವ ಎಚ್. ಕೆ.ಪಾಟೀಲ

## ಉತ್ತರ ಕರ್ನಾಟಕ ಅಭಿವೃದ್ಧಿಯ ಚರ್ಚೆ ಬೆಂಗಳೂರಲ್ಲೂ ನಡೆಯಲಿ

■ವಿಜಯಸಾಕ್ಷಿ ಸುದ್ದಿ, ಬೆಳಗಾವಿ, ಸುವರ್ಣ ಸೌಧ

ಬೆಂಗಳೂರಿನಲ್ಲಿ ನಡೆಯುವ ವಿಧಾನ ಮಂಡಲ ಅಧಿವೇಶನ ಸಂದರ್ಭದಲ್ಲಿ ಸಹ ನಾವು ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಬಹುದಾಗಿದೆ ಎಂದು ಕಾನೂನು ಹಾಗೂ ಪ್ರವಾಸೋದ್ಯಮ ಸಚಿವರಾದ ಹೆಚ್.ಕೆ. ಪಾಟೀಲ ಅವರು ಹೇಳಿದರು.



ವಿಧಾನ ಪರಿಷತ್‌ನಲ್ಲಿ ಡಿಸೆಂಬರ್ 15ರಂದು ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಯ ವಿಷಯಗಳ ಮೇಲೆ ನಡೆದ ಚರ್ಚೆಯ ವೇಳೆ ಅವರು ಮಾತನಾಡಿ, ಪ್ರತಿ ವರ್ಷ ಬೆಳಗಾವಿಯಲ್ಲಿ ನಡೆಯುವ ಅಧಿವೇಶನ ವೇಳೆಯಲ್ಲಿಯೇ ಉತ್ತರ ಕರ್ನಾಟಕ ಅಭಿವೃದ್ಧಿಯ ವಿಷಯ ಚರ್ಚೆಯಾಗಬೇಕು ಎನ್ನುವ ಮಾನಸಿಕ ಸ್ಥಿತಿಯಿಂದ ನಾವು ಹೊರ ಬರಬೇಕು. ಅಂತಹ ಮಾನಸಿಕ ತೊಡಕುಗಳು ದೂರಾಗಬೇಕು. ಜನರಿಗೆ ತಪ್ಪು ಸಂದೇಶ ಹೋಗಬಾರದು. ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ಮೈಸೂರು, ಮಂಡ್ಯ ಸೇರಿದಂತೆ ದಕ್ಷಿಣ ಕರ್ನಾಟಕ ಭಾಗದ ಜಿಲ್ಲೆಗಳ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಯಾಗಿ ಪರಿಹಾರ ಸಿಕ್ಕಿದೆ. ಅದರಂತೆ ನಾವು ಬೆಂಗಳೂರಿನಲ್ಲಿ ನಡೆಯುವ ಅಧಿವೇಶನದ ವೇಳೆ ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ಸಮಗ್ರ ಚರ್ಚಿಸಿ ಪರಿಹಾರೋಪಾಯ ಕಂಡುಕೊಳ್ಳಬಹುದಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ ಸಲಹೆ ಮಾಡಿದರು.

### ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆ ಸಮರ್ಪಕ ಅನುಷ್ಠಾನಕ್ಕೆ ಡಿ.ಸಿ. ಸೂಚನೆ

## ಇಲಾಖೆಯ ಅಧಿಕಾರಿಗಳು ಕ್ರಿಯಾಶೀಲರಾಗಿ

■ವಿಜಯಸಾಕ್ಷಿ ಸುದ್ದಿ, ಗದಗ

ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆಯು ಜನಸಾಮಾನ್ಯರಿಗೆ ನಗದುರಹಿತ ಆರೋಗ್ಯ ಚಿಕಿತ್ಸೆ ನೀಡುವ ಮಹತ್ವದ ಯೋಜನೆಯಾಗಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯಲು ಜನಸಾಮಾನ್ಯರು ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಕಾರ್ಡ್ ಪಡೆಯಬೇಕು ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಹೇಳಿದರು.



ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶುಕ್ರವಾರ ಜರುಗಿದ ಆರೋಗ್ಯ ಇಲಾಖೆ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿ–ಸಿಬ್ಬಂದಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆಯಡಿ ಬಿಪಿಎಲ್ ಪಡಿತರ ಕುಟುಂಬದ ಪ್ರತಿ ಸದಸ್ಯರಿಗೆ 5 ಲಕ್ಷ ರೂ.ಗಳವರೆಗೆ ಉಚಿತ ಚಿಕಿತ್ಸಾ ಸೌಲಭ್ಯ ಹಾಗೂ ಎಪಿಎಲ್ ಪಡಿತರ ಕುಟುಂಬದ ಪ್ರತಿ ಸದಸ್ಯರಿಗೆ 1.5 ಲಕ್ಷದವರೆಗೆ ನಗದು ರಹಿತ ಆರೋಗ್ಯ ಚಿಕಿತ್ಸೆ ಸೌಲಭ್ಯ ದೊರಕಲಿದೆ ಎಂದರು.

ಜಿಲ್ಲೆಯಲ್ಲಿ 9,41,247 ನಿಗದಿಪಡಿಸಿದ ಫಲಾನುಭವಿಗಳಿದ್ದು, ಈ ಪೈಕಿ 3,42,290 ಫಲಾನುಭವಿಗಳು ಈಗಾಗಲೇ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡು ಕಾರ್ಡ್ ಪಡೆಯುವ ಮೂಲಕ ಶೇ 36ರಷ್ಟು ಪ್ರಗತಿಯಾಗಿದೆ. ಈ ಯೋಜನೆಯ ಪ್ರಯೋಜನವನ್ನು ಜನಸಾಮಾನ್ಯರಿಗೆ ತಿಳಿಸಿ, ಜಾಗೃತಿ ಮೂಡಿಸುವ ಮೂಲಕ ಅರ್ಹ ಎಲ್ಲ ಫಲಾನುಭವಿಗಳು ನಿಗದಿತ ದಾಖಲೆ ನೀಡಿ ಕಾರ್ಡ್ ಪಡೆದು ಉಚಿತ ಆರೋಗ್ಯ ಸೌಲಭ್ಯ ತಮ್ಮದಾಗಿಸಿಕೊಳ್ಳಬೇಕು. ಸಂಬಂಧಿತ ಇಲಾಖೆ ಅಧಿಕಾರಿಗಳು ಕ್ರಿಯಾಶೀಲತೆ ಯಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಎಸ್. ನೀಲಗುಂದ ಮಾತನಾಡಿ, ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆ ನಗದುರಹಿತ ಚಿಕಿತ್ಸೆ ಪಡೆಯುವ ಯೋಜನೆಯಾಗಿದೆ. ಈ ಯೋಜನೆಯಡಿ 1,650 ವಿವಿಧ ಹಂತದ ಚಿಕಿತ್ಸೆ ನಿಗದಿಪಡಿಸಲಾಗಿದೆ. ಸರ್ಕಾರಿ ಆಸ್ಪತ್ರೆ ಹಾಗೂ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು. ಆರೋಗ್ಯ ಕಾರ್ಡ್ ಪಡೆಯಲು ಹತ್ತಿರದ ಕರ್ನಾಟಕ ಒನ್, ಸಿಎಸ್‌ಸಿ ಸೆಂಟರ್‌ಗಳಲ್ಲಿ ಅರ್ಜಿ ಸಲ್ಲಿಸಿ ಕಾರ್ಡ್ ಪಡೆಯಬಹುದು ಅಥವಾ ಫಲಾನುಭವಿಗಳೇ ನೇರವಾಗಿ ಆಯುಷ್ಮಾನ್ ಮೊಬೈಲ್ ಆ್ಯಪ್ ಮೂಲಕ ನೋಂದಾಯಿಸಿ ಕಾರ್ಡ್ ಪಡೆಯಬಹುದಾಗಿದೆ ಎಂದರು.

ಸಭೆಯಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು, ಪದವಿಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಕಾಲೇಜು ಪ್ರಾಂಶುಪಾಲರು ಹಾಜರಿದ್ದರು.

#### ಆಯುಷ್ಮಾನ್ ಆ್ಯಪ್

ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆಯ ಸೌಲಭ್ಯ ಹೊಂದಲು ಫಲಾನುಭವಿಗಳು ಮೊದಲು ಕಾರ್ಡ್ ಪಡೆಯಬೇಕು. ಗೂಗಲ್ ಪ್ಲೇಸ್ಟೋರ್‌ನಿಂದ ಆಯುಷ್ಮಾನ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಆಧಾರ್ ಲಿಂಕ್ ಇರುವ ಮೊಬೈಲ್ ಸಂಖ್ಯೆ ಬಳಸಿ ನೊಂದಾಯಿಸಿಕೊಳ್ಳಬಹುದಾಗಿದೆ.

### ಡಿ.17ರಂದು ಗದುಗಿಗೆ ಮುಖ್ಯಮಂತ್ರಿಗಳ ಭೇಟಿ | ಜಿಲ್ಲಾಧಿಕಾರಿಗಳಿಂದ ಪೂರ್ವಸಿದ್ಧತಾ ಸಭೆ

## ಎಲ್ಲ ಇಲಾಖೆಗಳ ಅಧಿಕಾರಿಗಳೂ ಸನ್ನದ್ಧರಾಗಿ

■ವಿಜಯಸಾಕ್ಷಿ ಸುದ್ದಿ, ಗದಗ

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಡಿ.17ರಂದು ಗದುಗಿಗೆ ಆಗಮಿಸಿ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ಸೂಕ್ತ ಭದ್ರತೆ ಹಾಗೂ ಶಿಷ್ಟಾಚಾರ ಪಾಲನೆ ಕುರಿತಂತೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಜಿಲ್ಲಾಡಳಿತದ ಸಭಾಭವನದಲ್ಲಿ ಶುಕ್ರವಾರ ಸಾಯಂಕಾಲ ಸಭೆ ನಡೆಸಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಸೂಕ್ತ ಭದ್ರತೆ ಒದಗಿಸಬೇಕು. ಕಾನೂನು ಸುವ್ಯವಸ್ಥೆ ಕುರಿತಂತೆ ಹಾಗೂ ಸಂಚಾರ ವ್ಯವಸ್ಥೆ ಸರಿಯಾಗಿ ನಿರ್ವಹಿಸಲು ಪೊಲೀಸ್ ಇಲಾಖಾಧಿಕಾರಿಗಳು ಸನ್ನದ್ಧರಾಗಿ ಯೋಜನೆ ರೂಪಿಸಬೇಕು ಎಂದರು.

ಮುಖ್ಯಮಂತ್ರಿಗಳು ಜಿಲ್ಲೆಗೆ ಆಗಮಿಸುವ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಎಲ್ಲ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು, ತಮ್ಮ ಇಲಾಖೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯೊಂದಿಗೆ ಹಾಜರಿರಬೇಕು. ಯಾವುದೇ ಸಂದರ್ಭದಲ್ಲೂ ಸೂಕ್ತ ಮಾಹಿತಿಯನ್ನು ಒದಗಿಸಲು ಸಿದ್ಧರಿರಬೇಕು ಎಂದು ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಮಾತನಾಡಿ, ಮುಖ್ಯಮಂತ್ರಿಗಳು ಸಂಚರಿಸುವ ಮಾರ್ಗದುದ್ದಕ್ಕೂ ಇರುವ ರಸ್ತೆ ತಡೆಗಳನ್ನು ವೈಜ್ಞಾನಿಕವಾಗಿ ಮಾಡಬೇಕು ಹಾಗೂ ರಸ್ತೆಗಳ ಸಣ್ಣ ಪುಟ್ಟ ದುರಸ್ತಿಗಳಿದ್ದಲ್ಲಿ ತಕ್ಷಣ ಪೂರ್ಣಗೊಳಿಸಬೇಕು.

ಕಾನೂನು ಸುವ್ಯವಸ್ಥೆ ಕುರಿತಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯ ನಿರ್ವಹಿಸಲಿದ್ದಾರೆ. ಒಟ್ಟಾರೆ ಮುಖ್ಯಮಂತ್ರಿಗಳು ಬಂದು ಹೋಗುವವರೆಗೆ ಎಲ್ಲ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಗಳ ಬಗ್ಗೆ ಸಂಪೂರ್ಣ ನಿಗಾ ವಹಿಸಬೇಕು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ, ಉಪವಿಭಾಗಾಧಿಕಾರಿ ಡಾ.ವೆಂಕಟೇಶ ನಾಯಕ, ಜಿ.ಪಂ. ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಿಬ್ಬಂದಿಗಳು ಹಾಜರಿದ್ದರು.

ಸಭೆಯಲ್ಲಿ ಮುಖ್ಯಮಂತ್ರಿಗಳು ತೆರಳುವ ಮಾರ್ಗ, ಹೆಲಿಪ್ಯಾಡ್, ಪ್ರವಾಸಿ ಮಂದಿರ, ಕಾರ್ಯಕ್ರಮದ ಸ್ಥಳ, ವಿದ್ಯುತ್ ವ್ಯವಸ್ಥೆ, ಮುಖ್ಯಮಂತ್ರಿಗಳ ಉಪಹಾರ–ಊಟದ ವ್ಯವಸ್ಥೆ, ಆರೋಗ್ಯ ವ್ಯವಸ್ಥೆ ಕುರಿತಂತೆ ಅಗತ್ಯ ಸಲಹೆ–ಸೂಚನೆಗಳನ್ನು ನೀಡಿದ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಸೂಕ್ತ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದರು.

## ರಾಜ್ಯ ಪ್ರತ್ಯೇಕತೆಯೇ ಪರಿಹಾರವಲ್ಲ: ಸಿಎಂ

■ವಿಜಯಸಾಕ್ಷಿ ಸುದ್ದಿ, ಬೆಳಗಾವಿ–ಸುವರ್ಣಸೌಧ

ಅನೇಕ ಹೋರಾಟಗಾರರ ತ್ಯಾಗ, ಬಲಿದಾನದ ಪ್ರತಿಫಲವಾಗಿ ಕರ್ನಾಟಕ ರಾಜ್ಯ ಏಕೀಕೃತವಾಗಿದೆ. ಅಭಿವೃದ್ಧಿಯ ಹಿನ್ನಡೆಯಲ್ಲಿ ರಾಜ್ಯ ಪ್ರತ್ಯೇಕತೆ ಬಗ್ಗೆ ಮಾತನಾಡುವುದು ಅಂತಹ ಮಹನೀಯರಿಗೆ ಅಪಮಾನ ಮಾಡಿದಂತೆ. ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ಎಲ್ಲರಲ್ಲೂ ಇಚ್ಛಾಶಕ್ತಿ ಬೇಕು. ರಾಜ್ಯ ಸರ್ಕಾರವು ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಸೇರಿದಂತೆ ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಅವರು ಶುಕ್ರವಾರ ವಿಧಾನಸಭೆಯಲ್ಲಿ ಜರುಗಿದ ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಮಾತನಾಡಿದರು.

ಕನ್ನಡಿಗರು ಏಕೀಕರಣ ಪೂರ್ವದಲ್ಲಿ ವಿವಿಧ ಪ್ರಾಂತಗಳಲ್ಲಿ ಹಂಚಿ ಹೋಗಿದ್ದರು. ಕರ್ನಾಟಕ ಒಂದಾಗಬೇಕು, ಕನ್ನಡಿಗರು ಒಟ್ಟಾಗಬೇಕು ಎಂದು ಬಯಸಿ ಉತ್ತರ, ದಕ್ಷಿಣ ಭಾಗದ ಅನೇಕ ನಾಯಕರು ನಿರಂತರ ಹೋರಾಟ ಮಾಡಿ ರಾಜ್ಯ ಒಗ್ಗೂಡಿಸಿದರು. ಉತ್ತರ ಕರ್ನಾಟಕ ಸೇರಿದಂತೆ ಈ ಭಾಗಗಳು ಅಭಿವೃದ್ಧಿಯಲ್ಲಿ ಹಿಂದೆ ಉಳಿಯಲು ಅನೇಕ ಕಾರಣಗಳಿವೆ ಎಂದು ವಿವರಿಸಿದ ಸಿಎಂ, ಏಕೀಕರಣಕ್ಕಿಂತ ಮುಂಚೆ ವಿವಿಧೆಡೆ ಹಂಚಿಹೋಗಿದ್ದ ಕರ್ನಾಟಕದ ಪ್ರದೇಶಗಳ ಸ್ಥಿತಿಗತಿ ಬಗ್ಗೆ ಸದನದಲ್ಲಿ ವಿವರಿಸಿದರು.

## ಬೆಳಗಾವಿ ಚಳಿಗಾಲದ ಅಧಿವೇಶನಕ್ಕೆ ತೆರೆ

■ವಿಜಯಸಾಕ್ಷಿ ಸುದ್ದಿ, ಬೆಳಗಾವಿ–ಸುವರ್ಣಸೌಧ

ಸುವರ್ಣ ಕರ್ನಾಟಕ ಸಂಭ್ರಮದ ನಡುವೆಯೇ ಜರುಗಿದ ಬೆಳಗಾವಿ ಅಧಿವೇಶನಕ್ಕೆ ಶುಕ್ರವಾರ ತೆರೆ ಬಿದ್ದಿದ್ದು, ವಿಧಾನ ಸಭೆ ಸಭಾಧ್ಯಕ್ಷ ಯು.ಟಿ. ಖಾದರ್ ಸದನ ಕಲಾಪಗಳನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಿದರು.

16ನೇ ವಿಧಾನ ಸಭೆಯ 2ನೇ ಅಧಿವೇಶನವು ಡಿ.4ರಂದು ಬೆಳಗಾವಿ ಸುವರ್ಣ ವಿಧಾನಸೌಧದ ವಿಧಾನಸಭೆಯ ಸಭಾಂಗಣದಲ್ಲಿ ಪ್ರಾರಂಭವಾಗಿ, ಡಿ.15ವರೆಗೆ ನಡೆಯಿತು. ಈ ಅಧಿವೇಶನದಲ್ಲಿ ಸುಮಾರು 66 ಗಂಟೆಗಳಿಗೂ ಹೆಚ್ಚು ಕಾರ್ಯಕಲಾಪ ನಡೆದಿದೆ. 2023–24ನೇ ಸಾಲಿನ ಪೂರಕ ಅಂದಾಜು, 2023–24ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿ, ಧನವಿನಿಯೋಗ ವಿಧೇಯಕವು ಸೇರಿದಂತೆ ಒಟ್ಟು 17 ವಿಧೇಯಕಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ.

ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 2023–24ನೇ ಸಾಲಿನ ಮೊದಲನೇ ಹಾಗೂ ಮಧ್ಯಂತರ ವರದಿ, ಸಾರ್ವಜನಿಕ ಉದ್ಯಮಗಳ ಸಮಿತಿಯ 136ನೇ ವರದಿ, ಕರ್ನಾಟಕ ವಿಧಾನಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ 2023–24 ನೇ ಸಾಲಿನ ಮೊದಲನೇ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ. ಒಟ್ಟು 9 ಅಧಿಸೂಚನೆಗಳು, 3 ಅಧ್ಯಾದೇಶಗಳು ಮತ್ತು 61 ವಾರ್ಷಿಕ ವರದಿಗಳು, 105 ಲೆಕ್ಕ ಪರಿಶೋಧನಾ ವರದಿಗಳು ಹಾಗೂ 1 ಲೆಕ್ಕ ತಪಾಸಣಾ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದ್ದಾರೆ.

## ಸಂಪಾದಕೀಯ

### ಉತ್ತರದ ಪ್ರಶ್ನೆಗಳಿಗೆ ಉತ್ತರವಾಗದ ಬೆಳಗಾವಿ ಚಳಿಗಾಲದ ಅಧಿವೇಶನ

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಮೊಟ್ಟ ಮೊದಲ ಚಳಿಗಾಲದ ಅಧಿವೇಶವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಆದರೆ ಉತ್ತರ ಕರ್ನಾಟಕದ ಅನೇಕ ಪ್ರಶ್ನೆಗಳಿಗೆ ಈ ಹಿಂದಿನ ಅಧಿವೇಶನಗಳಂತೆ ಉತ್ತರ ಮಾತ್ರ ಸಿಕ್ಕಿಲ್ಲ.

ಪ್ರತಿ ಚಳಿಗಾಲದ ಅಧಿವೇಶನದಲ್ಲೂ, ಅದು ಕಾಂಗ್ರೆಸ್ ಸರಕಾರವೇ ಇರಲಿ, ಬಿಜೆಪಿಯ ಅಧಿಕಾರದಲ್ಲಿರಲಿ. ಈ ಬಾರಿ ಉತ್ತರ ಕರ್ನಾಟಕ ಅಭಿವೃದ್ಧಿ ಬಗ್ಗೆ ಹೆಚ್ಚು ಚರ್ಚೆ ಮಾಡುತ್ತೇವೆ ಎನ್ನುತ್ತಾರೆ. ಜನ ಕುತೂಹಲದಿಂದ ಅಧಿವೇಶನದತ್ತ ದೃಷ್ಟಿ ನೆಟ್ಟು ಕುಳಿತುಕೊಳ್ಳುತ್ತಾರೆ. ಆದರೆ ಉತ್ತರದ ವಿಷಯಗಳಿಗೆ ಚರ್ಚೆ ಆಗುವುದೇ ಇಲ್ಲ.

ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಜನರ ನಿರೀಕ್ಷೆ ಹೆಚ್ಚಾದವು. ಆದರೆ ಅದಕ್ಕೆ ಪ್ರತಿಸ್ಪಂದನೆ ಮಾತ್ರ ಸರಕಾರದಿಂದ ಸಿಗಲಿಲ್ಲ. ಪ್ರತಿಪಕ್ಷದಿಂದಲೂ ಅದು ಸಿಗದೆ ಇರುವುದು ನಿರಾಸೆ ಮೂಡಿಸಿದೆ.

ಪ್ರತಿ ಚಳಿಗಾಲದ ಅಧಿವೇಶನದಲ್ಲೂ ಉತ್ತರ ಕರ್ನಾಟಕ ಅಭಿವೃದ್ಧಿಗೆ ನಂಜುಂಡಪ್ಪ ವರದಿ ಅನುಷ್ಠಾನ ಮಾಡುತ್ತೇವೆ ಎನ್ನುತ್ತಾರೆ. ನಂಜುಂಡಪ್ಪ ವರದಿ ಸಲ್ಲಿಸಿ ಎರಡು ದಶಕಕ್ಕೂ ಹೆಚ್ಚು ಕಾಲವಾಗಿದೆ. ಈಗಲೂ ಅದನ್ನು ಪೂರ್ಣ ಪ್ರಮಾಣದಲ್ಲಿ ಜಾರಿ ಮಾಡುತ್ತೇವೆ ಎನ್ನುತ್ತಾರೆ ವಿನಃ ಯಾವಾಗ ಪೂರ್ಣ ಪ್ರಮಾಣದಲ್ಲಿ ಜಾರಿಯಾಗುತ್ತದೆ ಎನ್ನುವುದು ಸರಕಾರಕ್ಕೂ ಗೊತ್ತಿಲ್ಲ.

ಆಳುವ ಜನಪ್ರತಿನಿಧಿಗಳಿಗೆ ಜನರ ಭಾವನೆ ಗೊತ್ತಾಗಿದೆ. ಉತ್ತರ ಕರ್ನಾಟಕ ವಿಷಯದ ಚರ್ಚೆ ಅಂದರೆ ಅದನ್ನು ನಂಜುಂಡಪ್ಪ ವರದಿ ಅನುಷ್ಠಾನ ಒಂದೇ ಎಂದುಕೊಂಡಿದ್ದಾರೆ. ಕೆಲ ವರ್ಷಗಳ ಹಿಂದಷ್ಟೆ ನಡೆದ ಕಾಂತರಾಜು ಆಯೋಗದ ವರದಿ ಅವೈಜ್ಞಾನಿಕ ಎನ್ನುತ್ತಾರೆ. ಮತ್ತೊಮ್ಮೆ ಸಮೀಕ್ಷೆ ನಡೆಯಬೇಕು ಎನ್ನುತ್ತಾರೆ. ಆದರೆ ಒಮ್ಮೆಯೂ ನಂಜುಂಡಪ್ಪ ವರದಿ ಹಳೆಯದಾಗಿದೆ. ಎರಡು ದಶಕದ ಅವಧಿಯಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ಆ ಕಾರಣಕ್ಕಾಗಿ ನಂಜುಂಡಪ್ಪ ವರದಿ ಪರಿಷ್ಕರಣೆಯಾಗಬೇಕು. ವರದಿಯ ಸಂಪೂರ್ಣ ಮಾಹಿತಿ ಜನರಿಗೆ ತಲುಪಿಸಬೇಕು ಎನ್ನುವ ಕನಿಷ್ಠ ಕಾಳಜಿ ಆಡಳಿತ ಪಕ್ಷಕ್ಕೆ ಇಲ್ಲ. ಪರಿಷ್ಕರಣೆ ವಿಚಾರ ಪ್ರಸ್ತಾಪಿಸುವ ಕನಿಷ್ಠ ಪ್ರಜ್ಞೆ ವಿಪಕ್ಷಗಳಿಗೂ ಇಲ್ಲ.

ಅಧಿವೇಶನದ ಕೊನೆಯ ಎರಡು ದಿನ ಉತ್ತರ ಕರ್ನಾಟಕದ ಬಗ್ಗೆ ಕೆಲ ಶಾಸಕರು, ಸಚಿವರು ಮಾತನಾಡಿದರು. ಆದರೆ ಅವು ಯಾವುದೂ ಕಾರ್ಯ ರೂಪಕ್ಕೆ ಬರುವುದಿಲ್ಲ. ಇನ್ನು ಪ್ರತಿಪಕ್ಷದ ಸದಸ್ಯರು ಮಾತಾಡಿದ್ದು ಕೇವಲ ರಾಜಕೀಯ ಕಾರಣಕ್ಕೆ ಎನ್ನುವುದು ಅವರ ಮಾತಿನ ಮೋಡಿಯಿಂದಲೇ ಸ್ಪಷ್ಟವಾಗಿದೆ. ಪ್ರತಿಪಕ್ಷಗಳ ನಾಯಕರಿಗೆ ಉತ್ತರ ಕರ್ನಾಟಕಕ್ಕೆ ಏನು ಆಗಬೇಕು ಎನ್ನುವ ಸ್ಪಷ್ಟತೆಯೇ ಇಲ್ಲ. ಆದರೂ ಕೊನೆಯ ಎರಡು ದಿನ ಭಾಷಣ ಮಾಡಿ, ನಾವು ಉತ್ತರ ಕರ್ನಾಟಕ ಪರ ಮಾತಾಡಿದ್ದೇವೆ ಎಂದು ಬೆನ್ನು ತಟ್ಟಿಕೊಳ್ಳುವ ಕೆಲಸವಷ್ಟೆ ಮಾಡಿದರು.

ಒಟ್ಟಾರೆ 10 ದಿನದ ಈ ಅಧಿವೇಶನದಲ್ಲಿ 66 ಗಂಟೆಗಳ ಕಾಲ ಚರ್ಚೆ ನಡೆದಿದೆ. ಒಟ್ಟಾರೆ ಚರ್ಚೆಯ ಅರ್ಧದಷ್ಟು ಅರ್ಥಪೂರ್ಣ ಚರ್ಚೆ ನಡೆದಿಲ್ಲ. ಭವಿಷ್ಯದಲ್ಲಾದರೂ ಅರ್ಥಪೂರ್ಣ ಚರ್ಚೆಗೆ ಅಧಿವೇಶನ ವೇದಿಕೆಯಾಗಲಿ. ಸರಕಾರ ಮತ್ತು ಪ್ರತಿಪಕ್ಷಗಳು ಸಿದ್ಧತೆಯೊಂದಿಗೆ ಅಧಿವೇಶನಕ್ಕೆ ಬರುವಂತಾಗಲಿ ಎನ್ನುವುದೇ ನಮ್ಮ ಆಶಯ.

**ಉತ್ತರ ಕರ್ನಾಟಕದ ಅಟಲ್ ಬಿಹಾರಿ ವಾಜಪೇಯಿ ಜಗದೀಶ್ ಶೆಟ್ಟರ್ ಜನ್ಮದಿನದ ವಿಶೇಷ ಬರಹ**

# ಸರಳ ಸಜ್ಜನಿಕೆಯ ಜನ ನಾಯಕ

ಸಾದಾ ಸೀದಾ, ಸರಳ ಸಜ್ಜನ, ಉತ್ತಮ ವಾಕ್ಚತುತ್ವ, ಭಾವೋದ್ವೇಗ ಇಲ್ಲದ ಅಪ್ಪಟ ಬಸವಣ್ಣನ ಅನುಯಾಯಿಗಳು, ಉತ್ತರ ಕರ್ನಾಟಕದ ಅಟಲ್ ಬಿಹಾರಿ ವಾಜಪೇಯಿ ಎಂದೇ ಖ್ಯಾತಿ ಪಡೆದು ಜನಮಾನಸದಲ್ಲಿ ಅಚ್ಚಳಿಯದೆ ಉಳಿಯುವ ನಾಯಕ ಜಗದೀಶ್ ಶೆಟ್ಟರ್.

ಜಗದೀಶ್ ಶೆಟ್ಟರ್ ಅವರು ಕರ್ನಾಟಕ ರಾಜ್ಯದ 21ನೇ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದವರು. ಗ್ರಾಮ ಪಂಚಾಯಿತಿ ಸದಸ್ಯರಾದರೇ ತಲೆಗೆ ಕಿರೀಟ ಬಂದವರಂತೆ ವರ್ತಿಸುವ ಇಂದಿನ ಕಾಲದಲ್ಲಿ ಮಾಜಿ ಮುಖ್ಯಮಂತ್ರಿಯಾಗಿ ರಾಜ್ಯವನ್ನೇ ಆಳಿದರೂ ಸಹಿತ ಸ್ವಲ್ಪವೂ ಆಡಂಬರ, ಗರ್ವ, ಅಧಿಕಾರ ದರ್ಪ ತೋರದ ಸರಳ ಸಜ್ಜನಿಕೆಯ, ಉತ್ತರ ಕರ್ನಾಟಕದ ಪ್ರಭಾವಿ ರಾಜಕಾರಣಿಯಾಗಿ ಗುರುತಿಸಿಕೊಂಡವರು ಜಗದೀಶ್ ಶೆಟ್ಟರ್.

ಶೆಟ್ಟರ್ ಅವರು ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಕೆರೂರು ಪಟ್ಟಣದಲ್ಲಿ ಲಿಂಗಾಯತ ಕುಟುಂಬದ ತಂದೆ ಶಿವಪ್ಪ ತಾಯಿ ಬಸವಣ್ಣೆಮ್ಮ ದಂಪತಿಗಳ ಸುಪುತ್ರನಾಗಿ ದಿನಾಂಕ 17.12.1955ರಂದು ಜನಿಸಿದರು. ಪ್ರಾರಂಭದಿಂದಲೂ ಮಧ್ಯಮ ವರ್ಗದ ಕುಟುಂಬ ಇವರದ್ದಾಗಿದ್ದು, ತಕ್ಕ ಮಟ್ಟಿಗೆ ಯಾವುದಕ್ಕೂ ಕೊರತೆ ಕಾಣದ ತುಂಬು ಕುಟುಂಬದಲ್ಲಿ ಒಬ್ಬರಾಗಿ ಬಾಲ್ಯದಿಂದಲೂ ಹಿರಿಯರ ಆದರ್ಶಗಳನ್ನು ಮೈಗೂಡಿಸಿಕೊಂಡು ತಂದೆಯ ಪರಿಪಾಲಕರಾಗಿ ಬಸವ ತತ್ವಗಳನ್ನು ಅಳವಡಿಕೊಂಡು ಬೆಳೆದವರು.

ವಿದ್ಯಾರ್ಥಿ ಜೀವನದಿಂದಲೂ ಶೆಟ್ಟರ್ ನೇರ–ನಿಷ್ಠುರವಾದಿಯಾಗಿದ್ದರು, ತಪ್ಪು ಎನಿಸಿದ್ದನ್ನು ಹೊಂದಾಣಿಕೆ ಮಾಡಿಕೊಳ್ಳದೆ ನೇರವಾಗಿ ಹೇಳುವ ಸ್ವಭಾವ ಇವರದಾಗಿತ್ತು. ಪದವಿ ಶಿಕ್ಷಣದ ನಂತರ ಕಾನೂನು ಅಧ್ಯಯನಕ್ಕೆ ಮುಂದಾಗಿ, ಬೆಳಗಾವಿಯಲ್ಲಿ ಕಾನೂನು ಪದವಿಯನ್ನು ಪಡೆದುಕೊಂಡರು. ನಂತರ ವೃತ್ತಿ ಪ್ರಾರಂಭಿಸಿ ಹಲವು ವರ್ಷಗಳ ಕಾಲ ಕಾನೂನು ವೃತ್ತಿಯಲ್ಲಿ ಮುಂದುವರೆದರು.

ಅಷ್ಟೊತ್ತಿಗಾಲೇ ಜಿಲ್ಲೆಯಾದ್ಯಂತ ಸಣ್ಣದಾಗಿ ಹೆಸರು ಬೆಳೆದಿತ್ತು. ಬಿಜೆಪಿಯ ಎಲ್ಲ ಹುದ್ದೆಗಳನ್ನು ಸಮರ್ಥವಾಗಿ ನಿಭಾಯಿಸಿದರು. ಚತುರತೆಯಿಂದ ಸಂಘಟನೆಯಲ್ಲಿ ತೊಡಗಿಕೊಂಡು ಜನಪರ ಹೋರಾಟದ ಮೂಲಕ ಮುಂಚೂಣಿಯ ನಾಯಕರಾಗಿ ನಿಲ್ಲುತ್ತಿದ್ದರು. ಜನರೊಂದಿಗೆ ಬೆರೆತು ಜನನಾಯಕರಾಗಿ ಗುರುತಿಸಿಕೊಂಡರು. ಆರೆಸ್ಸೆಸ್ ಹಿನ್ನೆಲೆಯಿಂದ ಹಲವಾರು ಹಿಂದೂ ಸಂಘಟನೆಯೊಂದಿಗೆ ಬೆರೆತು ಬಂದಿದ್ದಾದರೂ ಸಹಿತ ಮತ್ತೊಂದು ಸಮುದಾಯವನ್ನು ಎಂದೂ ದ್ವೇಷಿಸಿದವರಲ್ಲ. ಆದರೆ ಎಂದಿಗೂ ಸ್ವಾಭಿಮಾನ ಬಿಟ್ಟು ಬದುಕಿದವರಲ್ಲ ಶೆಟ್ಟರ್.

1994ರಲ್ಲಿ ಮೊದಲ ಬಾರಿಗೆ ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಿಂದ ಸ್ಪರ್ಧಿಸಿ 15 ಸಾವಿರಕ್ಕೂ ಅಧಿಕ ಮತಗಳಿಂದ ಭರ್ಜರಿ ಯಶಸ್ಸು ಸಾಧಿಸಿ ಮೊದಲ ಬಾರಿಗೆ ಶಾಸಕರಾದರು. ಅಲ್ಲದೇ ಉತ್ತರ ಕರ್ನಾಟಕದಲ್ಲಿ ಬಿಜೆಪಿಗೆ ಮುನ್ನುಡಿ ಬರೆದದ್ದು ಶೆಟ್ಟರ್ ಅವರೇ ಎಂಬುದು ವಿಶೇಷ. ಅಲ್ಲಿಂದ ಶುರುವಾದ ಶೆಟ್ಟರ್ ರಾಜಕೀಯ ಪಯಣ, ಸತತ ಆರು ಬಾರಿ ಶಾಸಕರಾಗಿ, ವಿರೋಧ ಪಕ್ಷದ ನಾಯಕರಾಗಿ, ರಾಜ್ಯ ಬಿಜೆಪಿಯ



ಅಧ್ಯಕ್ಷರಾಗಿ, ಕಂದಾಯ ಸಚಿವರಾಗಿ, ಸಭಾಪತಿಯಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಹಾಗೂ ರಾಜ್ಯದ ಮುಖ್ಯಮಂತ್ರಿಯಾಗಿ ರಾಜ್ಯವನ್ನು ಅಭಿವೃದ್ಧಿ ಪಥದತ್ತ ಮುನ್ನಡೆಸಿದರು.

ವಿಶೇಷವಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಯ ಕನಸು ಹೊತ್ತು ಹಲವಾರು ಬಗೆಯಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಕಾರಣವಾಗಿದ್ದಾರೆ. ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಹೊಸದಾಗಿ 43 ತಾಲೂಕುಗಳನ್ನು ಘೋಷಿಸಿ 270ಕ್ಕೂ ಅಧಿಕ ನಾಡಕಛೇರಿಗಳನ್ನು ಸ್ಥಾಪಿಸಿ ತಹಸೀಲ್ದಾರ್ ಕಚೇರಿಗೆ ಅಲೆದಾಟವಿಲ್ಲದೆ ಅಂಗೈಯಲ್ಲಿ ಸರ್ಕಾರಿ ಸೇವೆಗಳು ಜನಸಾಮಾನ್ಯರಿಗೆ ತಲುಪುವಂತೆ ಮಾಡಿದರು. ರೈತರಿಗೆ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿ ರಾಜ್ಯಾದ್ಯಂತ ಏತ ನೀರಾವರಿಗೆ ಒತ್ತು ನೀಡಿ ರೈತರ ಭೂಮಿಗೆ ನೀರು ಹರಿಸಿದರು.

ಸರಿಯಾದ ಮಳೆ–ಬೆಳೆ ಇಲ್ಲದೆ ಸಾಲದಿಂದ ಬಳಲುತ್ತಿದ್ದ ರಾಜ್ಯದ ರೈತರ ಸಾಲ ಮನ್ನಾ ಮಾಡಿದರು. ಉತ್ತರ ಕರ್ನಾಟಕದ ಬಹುತೇಕ ಸರ್ಕಾರಿ ಕಟ್ಟಡಗಳ ಮೇಲೆ ಶೆಟ್ಟರ್ ಅವರ ಹೆಸರು ರಾರಾಜಿಸುತ್ತಿದೆ. ಇಷ್ಟೆಲ್ಲಾ ಸಾಧನೆಗೈದರೂ ಕೊಂಚವೂ ದರ್ಪ, ಅಧಿಕಾರ ಮದ ಎಂದಿಗೂ ಅವರಲ್ಲಿ ಕಾಣಲಿಲ್ಲ. ಎಂದಿನಂತೆ ಇಂದಿಗೂ ಸರಳತೆಯಿಂದ ಜನರೊಂದಿಗೆ ಬೆರೆಯುವ ನಾಯಕರಾಗಿದ್ದಾರೆ.

ಶೆಟ್ಟರ್ ಅವರು ಸತತ ಮೂವತ್ತು ವರ್ಷಗಳ ಕಾಲ ಉತ್ತರ ಕರ್ನಾಟಕದಲ್ಲಿ ಬಿಜೆಪಿ ಗಟ್ಟಿಯಾಗಿ ಬೇರೂರಲು ಕಾರಣವಾಗಿದ್ದರು ಎಂದಿಗೂ ಸಹ ಇತರ ರಾಜಕಾರಣಿಗಳಂತೆ ವೈಯಕ್ತಿಕ ವರ್ಚಸ್ಸು ಬೆಳೆಸಿಕೊಳ್ಳಬೇಕೆಂದು ಆಲೋಚಿಸಿದವರಲ್ಲ. ಸ್ವಾಭಿಮಾನಿಯಾಗಿ ಬಿಜೆಪಿಯ ಕಲ್ಪನೆಗೂ ಬಾರದ ಗಟ್ಟಿ ನಿಲುವನ್ನು ತೆಗೆದುಕೊಂಡು ಹೊಸ ಅಧ್ಯಾಯಕ್ಕೆ ಮುನ್ನುಡಿ ಬರೆದರು. ಇಡೀ ಉತ್ತರ ಕರ್ನಾಟಕದ ಹಾಗೂ ಕಲ್ಯಾಣ ಕರ್ನಾಟಕದ ಬಹುತೇಕ ಜನತೆ ಶೆಟ್ಟರ್ ಅವರಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಬೆಂಬಲಕ್ಕೆ ನಿಂತು ಶುಭ ಹಾರೈಸಿದರು. ಬಹುಶಃ ವೀರೇಂದ್ರ ಪಾಟೀಲ್ ಅವರ ನಂತರ ಉತ್ತರ ಕರ್ನಾಟಕದಲ್ಲಿ ಕುಗ್ಗಿದ್ದ ಕಾಂಗ್ರೆಸ್ ಪಕ್ಷ ಶೆಟ್ಟರ್ ಅವರ ಪಕ್ಷ ಬದಲಾವಣೆಯಿಂದ ಮತ್ತೆ ಪುಟಿದೆದ್ದು ನಿಂತಿತು.

ಉತ್ತರ ಕರ್ನಾಟಕದ ಪ್ರಭಾವಿ ನಾಯಕರಾಗಿ ಸಮಗ್ರ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಕನಸು ಕಂಡವರು, ಉತ್ತರ ಕರ್ನಾಟಕದ ಭಾಗದ ಜನತೆಯ ಧ್ವನಿಯಾಗಿ ಇರುವ ಸ್ವಾಭಿಮಾನಿಗಳ ಭರವಸೆಯ ನೇತಾರರಾಗಿದ್ದಾರೆ.

**– ಪ್ರವೀಣ ಸಂಗಳದಶೆಟ್ಟರ್.**

## ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವ ಇಂದು

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ತಾಲೂಕಿನ ಬಾಲೆ ಹೊಸೂರಿನ ಐತಿಹಾಸಿಕ ಉತ್ತರಾಭಿಮುಖಿಯಾದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಡಿ.16ರ ಶನಿವಾರ ಸಂಜೆ 6ಕ್ಕೆ ಕಾರ್ತಿಕ ಸಹಸ್ರ ದೀಪೋತ್ಸವ, ವಿಶೇಷ ಪೂಜೆ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಶ್ರೀ ಫಕೀರ ದಿಂಗಾಲೇಶ್ವರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಲಿವೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

# ಗುರು ಪರಶಿವನ ಸಾಕಾರ ರೂಪ

**■ವಿಜಯಸಾಕ್ಷಿ ಸುದ್ದಿ, ಶಿವಮೊಗ್ಗ**

ಮನುಷ್ಯ ಎಷ್ಟೇ ಭೌತಿಕ ಸಂಪತ್ತು ಗಳಿಸಿದರೂ ಇಂದು ಮಾನಸಿಕ ಶಾಂತಿ, ಸಮಾಧಾನ, ಸಂತೃಪ್ತಿ ಇಲ್ಲದಾಗಿದೆ. ಧರ್ಮಾಚರಣೆಯಿಂದ ಮನುಷ್ಯನಿಗೆ ಶಾಂತಿ–ಸಮಾಧಾನ ಸಿಗಲು ಸಾಧ್ಯ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ನಗರದ ಸೋಮಿನಕೊಪ್ಪದಲ್ಲಿ ನಡೆಸಿದ ಇಷ್ಟಲಿಂಗ ಮಹಾಪೂಜಾ ಹಾಗೂ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಸಿದ್ಧಾಂತ ಶಿಖಾಮಣಿ ಧರ್ಮ ಗ್ರಂಥದಲ್ಲಿ ಶ್ರೀ ಜಗದ್ಗುರು



ರೇಣುಕಾಚಾರ್ಯರು ಇಷ್ಟಲಿಂಗ ಪೂಜೆಯಿಂದ ಇಷ್ಟಾರ್ಥಗಳು ನೆರವೇರಿ ಅನಿಷ್ಟಗಳು ಪರಿಹಾರವಾಗುತ್ತವೆ ಎಂದಿದ್ದಾರೆ. ವೀರಶೈವರಾದವರು ಪ್ರತಿದಿನ ಇಷ್ಟಲಿಂಗ ಪೂಜಿಸುವುದರಿಂದ ಶಾಂತಿ–ಸಮಾಧಾನ ದೊರೆಯುವುದಲ್ಲದೇ ಕ್ರಿಯಾಶೀಲರಾಗಿ ಬಾಳಲು ಸಾಧ್ಯವಾಗುತ್ತದೆ. ಜೀವನದಲ್ಲಿ ಉನ್ನತಿ ಕಾಣಲು ನಿರಂತರ ಪ್ರಯತ್ನ ಮತ್ತು ಸಾಧನೆ ಬೇಕು. ಆದರ್ಶ ವ್ಯಕ್ತಿತ್ವವನ್ನು ರೂಪಿಸುವ ಶಕ್ತಿ ಜಂಗಮರಿಗೆ–ಗುರುವಿಗೆ ಇದೆ. ಗುರುವು ಪರಶಿವನ ಸಾಕಾರ ರೂಪಿಯಾಗಿದ್ದಾನೆ ಎಂದರು.

ಸಮಾರಂಭದಲ್ಲಿ ಬಿಳಕಿ ಹಿರೇಮಠದ ರಾಚೋಟೇಶ್ವರ ಶಿವಾಚಾರ್ಯ ಸ್ವಾಮಿಗಳು, ಮಳಲಿ ಡಾ.ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ಹಾಗೂ ಕಡೆನಂದಿಹಳ್ಳಿ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಪಾಲ್ಗೊಂಡು ಉಪದೇಶಾಮೃತ ನೀಡಿದರು.

ಸುಧಾ–ಜಯದೇವಪ್ಪ ಗುಡಿ ಕೋಟೆ, ತಿಪಟೂರು ಕೆ.ಶಿವಶಂಕರಯ್ಯ, ಗೌರೀಶ, ಗಿರೀಶ ಜಿ.ಕೆ. ಇನ್ನಿತರರು ಇದ್ದರು. ಜಿ. ಜಯದೇವಪ್ಪ ಸ್ವಾಗತಿಸಿದರು. ಶಾಂತಾ ಆನಂದ ಭಕ್ತಿ ಗೀತೆ ಹಾಡಿದರು.

## ಉತ್ತರ ಕರ್ನಾಟಕ ಭಾಗದಲ್ಲಿ ಅಕ್ಷರ ಕ್ರಾಂತಿಯಾಗಲಿ

**■ವಿಜಯಸಾಕ್ಷಿ ಸುದ್ದಿ, ಬೆಳಗಾವಿ, ಸುವರ್ಣ ಸೌಧ**

ಉತ್ತರ ಕರ್ನಾಟಕ ಭಾಗದ ದೇವದುರ್ಗ, ರಾಯಚೂರು ಸೇರಿದಂತೆ ಈ ಭಾಗದ ಅನೇಕ ಕಡೆಗಳಲ್ಲಿ ಸಾಕ್ಷರತಾ ಪ್ರಮಾಣವು ಬಹಳಷ್ಟು ಕಡಿಮೆ ಇದೆ. ಇದು ಅಭಿವೃದ್ಧಿಗೆ ತೊಡಕಾಗಿ ಪರಿಣಮಿಸಿದೆ. ಈ ಭಾಗದಲ್ಲಿ ಅಕ್ಷರ ಕ್ರಾಂತಿಯಾದಲ್ಲಿ ಹೊಸ ಬದಲಾವಣೆ ಕಾಣಬಹುದಾಗಿದೆ ಎಂದು ಸದಸ್ಯರಾದ ಎಚ್.ವಿಶ್ವನಾಥ ಅವರು ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಡಿಸೆಂಬರ್ 15ರಂದು ಉತ್ತರ ಕರ್ನಾಟಕ ಅಭಿವೃದ್ಧಿಯ ಕುರಿತು ನಡೆದ ಚರ್ಚೆಯಲ್ಲಿ ಮಾತನಾಡಿದ ಅವರು, ಈ ಭಾಗದ ಜನರ ಸಾಕ್ಷರತಾ ಪ್ರಮಾಣ ಎಷ್ಟು? ಎಂಬುದಾಗಿ ಪ್ರಶ್ನಿಸಿಕೊಂಡೇ ನಾವು ಅಭಿವೃದ್ಧಿಯ ಬಗ್ಗೆ ಮಾತನಾಡಬೇಕು. ಸಾಕ್ಷರತೆ ಇಲ್ಲದೇ ಅಭಿವೃದ್ಧಿಯನ್ನು ನಿರೀಕ್ಷಿಸಲಾಗದು. ವ್ಯಕ್ತಿ ಸಾಕ್ಷರನಾದಾಗ ಮಾತ್ರ ಉತ್ತಮ ವಿವೇಚನೆ ಸಾಧ್ಯವಾಗುತ್ತದೆ. ಈ ಭಾಗದಲ್ಲಿ 15000 ಶಾಲಾ ಶಿಕ್ಷಕರ ಕೊರತೆ ಇದೆ ಎಂದು ತಿಳಿಸಿದರು. ಸದಸ್ಯರಾದ ನಿರಾಣಿ ಹನುಮಂತ ರುದ್ರಪ್ಪ ಮಾತನಾಡಿ, ಉತ್ತರ ಕರ್ನಾಟಕವು ಅಭಿವೃದ್ಧಿ ದೃಷ್ಟಿಯಿಂದ ಅನ್ಯಾಯಕ್ಕೀಡಾಗಿದೆ. ಇಲ್ಲಿನ ಮಾನವ ಸಂಪನ್ಮೂಲ ಸದ್ಬಳಕೆಯಾಗಬೇಕು. 371(ಜೆ) ಸರಿಯಾಗಿ ಅನುಷ್ಠಾನವಾಗಬೇಕು. ಇದಕ್ಕಾಗಿ ಮೀಸಲಿಡುವ ಸಾವಿರಾರು ಕೋಟಿ ರೂ.ಗಳ ಹಣವು ಸದ್ವಿನಿಯೋಗವಾಗಬೇಕು. ಈ ಭಾಗದಲ್ಲಿ ಅಭಿವೃದ್ಧಿಯ ಅಸಮತೋಲನ ಸರಿಪಡಿಸಬೇಕು. ಈ ಭಾಗದ ಮಣ್ಣು ಮತ್ತು ನೀರು ಸಂರಕ್ಷಿಸಬೇಕು. ಈ ಭಾಗದ ನದಿಗಳ ಜೋಡಣೆ ಯೋಜನೆಗಳು ಕಾರ್ಯಾನುಷ್ಠಾನವಾಗಬೇಕು ಎಂದರು.

ಸದಸ್ಯರಾದ ಪ್ರದೀಪ್ ಶೆಟ್ಟರ್, ಉತ್ತರ ಕರ್ನಾಟಕ ಅಭಿವೃದ್ಧಿ ಚರ್ಚೆಯನ್ನು ಬರೀ ಬೆಳಗಾವಿ ಅಧಿವೇಶನಕ್ಕೆ ಸೀಮಿತಗೊಳಿಸದೇ ಬೆಂಗಳೂರಿನಲ್ಲಿ ನಡೆಯುವ ಅಧಿವೇಶನ ವೇಳೆಯಲ್ಲಿ ಎರಡು ದಿನಗಳ ಕಾಲ ಕಡ್ಡಾಯವಾಗಿ ಅಧಿವೇಶನವನ್ನು ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗೆ ಮೀಸಲಿರಿಸಬೇಕು ಎಂದು ಸಲಹೆ ಮಾಡಿದರು.

## ಉ.ಕ ಅಭಿವೃದ್ಧಿ ಕುರಿತು ವಿಶೇಷ ಚರ್ಚೆ

**■ವಿಜಯಸಾಕ್ಷಿ ಸುದ್ದಿ, ಬೆಳಗಾವಿ–ಸುವರ್ಣಸೌಧ**

ಈ ಬಾರಿಯ ವಿಧಾನ ಸಭಾ ಕಲಾಪದಲ್ಲಿ ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತಾಗಿ ವಿಶೇಷ ಚರ್ಚೆ ಜರುಗಿದ್ದು, 42 ಶಾಸಕರು 11 ಗಂಟೆ 4 ನಿಮಿಷಗಳ ಕಾಲ ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತು ಮಾತನಾಡಿದರು. ರಾಜ್ಯದಲ್ಲಿ ಆವರಿಸಿರುವ ಬರಗಾಲದ ಕುರಿತು ವಿಧಾನ ಸಭೆಯಲ್ಲಿ ಚರ್ಚೆ ಜರುಗಿತು. ಶಾಸಕರು ಹಾಗೂ ಮಂತ್ರಿಗಳು ಬರಗಾಲದ ಬಗ್ಗೆ ಯುದ್ಧೋಪಾದಿಯಲ್ಲಿ ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ನೀತಿಗಳನ್ನು ರೂಪಿಸಿದರು. ಯುವ ಶಾಸಕರು ಹವಮಾನ ಬದಲಾವಣೆ ಹಾಗೂ ಅದರ ಗಂಭೀರತೆಯ ಬಗ್ಗೆ ಸದನಲ್ಲಿ ಗಹನ ವಿಚಾರಗಳನ್ನು ಮಂಡಿಸಿದರು. 'ವರ್ಣ ಸಂಭ್ರಮದ ಹಿನ್ನಲೆಯಲ್ಲಿ ಆರಂಭವಾದ ಅಧಿವೇಶನಕ್ಕೆ ಈ ಬಾರಿ ಸಾಂಸ್ಕೃತಿಕ ಮೆರಗು ದೊರಕಿದೆ. ಇದರ ನಡುವೆಯೇ ಸುವರ್ಣ ಸೌಧಕ್ಕೆ ಶಾಶ್ವತ ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರಕ್ಕೆ ಚಾಲನೆ ನೀಡಲಾಗಿದೆ.

## ಜಾನಪದ ಕಲೆಗಳು ಗ್ರಾಮೀಣ ಭಾರತದ ಜೀವಾಳ



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಇಂದಿನ ಆಧುನಿಕತೆಯ ಭರಾಟೆಯಲ್ಲಿ ಮರೆಯಾಗುತ್ತಿರುವ ನಮ್ಮ ಸಂಸ್ಕೃತಿ, ಕಲೆ, ಸಾಹಿತ್ಯ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಕನ್ನಡ ಚಲನಚಿತ್ರ ನಟಿ ಭಾವನಾ ರಾಮಣ್ಣ ಹೇಳಿದರು.

ಅವರು ಶಿರಹಟ್ಟಿಯ ಶ್ರೀ ಬೀರೇಶ್ವರ ಸೇವಾ ಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗದಗ ಇವರ ಸಂಯುಕ್ತ ಆಶ್ರಯದಲ್ಲಿ ಜರುಗಿದ ಶ್ರೀ ಬೀರೇಶ್ವರ ಕಾರ್ತಿಕೋತ್ಸವದ 18ನೇ ವರ್ಷದ ಡೊಳ್ಳಿನ ಪದಗಳ ತ್ರಿಕೋನ ಸ್ಪರ್ಧೆ ಹಾಗೂ ಸವಿಸವಿ ನೆನಪು ಜನಪದ ರಸಮಂಜರಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇಂದಿನ ಯುವ ಸಮುದಾಯ ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗುತ್ತಿದ್ದು, ದೇಶೀಯ ಸಂಸ್ಕೃತಿ ಅವನತಿಯತ್ತ ಸಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಜನಪದ ಕಲೆ ಮತ್ತು ಕಲಾವಿದರು ಗ್ರಾಮೀಣ ಭಾರತದ ತಾಯಿ ಬೇರುಗಳಿದ್ದಂತೆ. ಜನಜೀವನ ಮತ್ತು ಉನ್ನತ ಸಾಂಸ್ಕೃತಿಕ ಪರಂಪರೆ ಬಿಂಬಿಸುವ ಜನಪದ ಕಲೆಗಳು ಗ್ರಾಮೀಣ ಭಾರತದ ಜೀವಾಳವಾಗಿವೆ. ಅವುಗಳನ್ನು ಉಳಿಸಿ ಬೆಳೆಸುವ ಕಾರ್ಯ ಶಿರಹಟ್ಟಿಯಲ್ಲಿ ಕಳೆದ 18 ವರ್ಷಗಳಿಂದ ಬೀರೇಶ್ವರ ಸೇವಾ ಸಮಿತಿ ವತಿಯಿಂದ ನಡೆಯುತ್ತಿರುವುದು ಶ್ಲಾಘನೀಯ ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸುಜಾತಾ ದೊಡ್ಡಮನಿ, ಮಾಜಿ ಶಾಸಕ ಜಿ.ಎಸ್. ಗಡ್ಡದ್ದೇವರಮಠ ಮಾತನಾಡಿದರು. ಮಹೇಶ ಹಾರೋಗೇರಿ ಉಪನ್ಯಾಸ ನೀಡಿದರು. ದೇವಪ್ಪ ಬಟ್ಟೂರ, ಮಂಜುನಾಥ ಘಂಟಿ, ಹೊನ್ನಪ್ಪ ಶಿರಹಟ್ಟಿ, ಗೂಳಪ್ಪ ಕರಿಗಾರ, ಹೊನ್ನೇಶ ಪೋಟಿ, ಶೇಖಣ್ಣ ಕಾಳೆ, ಶಿವನಗೌಡ ಪಾಟೀಲ, ಯಲ್ಲಪ್ಪ ಸೂರಣಗಿ, ಮಂಜಪ್ಪ ಹಮ್ಮಿಗಿ, ರಾಜು ಮಡಿವಾಳರ, ಭಾಗ್ಯಶ್ರೀ ಲಮಾಣಿ, ಆನಂದ ಮಾಳೇಕೊಪ್ಪ, ನೀಲಪ್ಪ ಶೆರಸೂರಿ, ನೀಲಪ್ಪ ಪಡಿಗೇರಿ ಮುಂತಾದವರು ಉಪಸ್ಥಿತರಿದ್ದರು.

## ನನ್ನ ಹೆತ್ತಾಕಿ

ನಂಗ ಜೀವಾ ಕೊಟ್ಟಾಕಿ
ಜೀವನಾ ಅಂದ್ರ ಏನಂತ ತಿಳಿಸಿ ಹೇಳಿದಾಕಿ
ಚಂದಗ ಅಡುಗಿ ಮಾಡಾಕ ಕಲಿ ಮಾರಾಯ್ತಿ ಇಲ್ಲ ಅಂದ್ರ
ಗಂಡನ ಮನ್ಯಾಗ ನನ್ನು ಬೈಸ್ತಿ ಅಂತ ಬಯ್ಯಾಕಿ

ಆಜು –ಬಾಜು ಮಂದಿ ಮುಂದ ಒಟ್ಟ ಮಗಳನ್ನ ಬಿಟ್ಟ ಕೊಡದಾಕಿ
ಯಾ ದೇವರಗಿಂತ ಏನ್ ಕಮ್ಮಿ ಇಲ್ಲ ರಿ ನನ್ನ ಹೆತ್ತಾಕಿ...!

ನಾ ಸಿರಿ ಉಟ್ರ ನನ್ನ ಅಂದಾ –ಚಂದಾ ನೋಡುವಾಕಿ
ಒಬ್ಬಾಕಿನ ಮಗಳ ಅಂತ ಮುದ್ದ ಮಾಡಿ ನೆದರ ತಗ್ಯಾಕಿ
ನನ್ನ ಬಾಯಾಗ ಬರು ಸಂಸ್ಕೃತ ಕೇಳಿ ತಾನು ನಗಾಕಿ
ನನ್ನ ಸಲುವಾಗಿ ತನ್ನ ಜೀವನ ಮೂಡಿಪ ಇಟ್ಟಾಕಿ
ಬೆಲೆ ಕಟ್ಟಾಕ ಆಗದೆ ಇರೋ ದೊಡ್ಡ ಆಸ್ತಿ ರಿ ನಂಗ ನನ್ನ ಹೆತ್ತಾಕಿ...!

ರಾಣಿ ಹಂಗ ನನ್ನ ಬೆಳಸಿದಾಕಿ
ಬಡತನ ಅನ್ನುದ ಏನ ಅಂತ ಇನ್ನು ತನಾ ನಂಗ ತೋರಿಸಿ ಕೊಡದಾಕಿ
ನಾ ಕೇಳುಕಿನ್ನ ಮುದ್ಲ ಎಲ್ಲಾ ಕೊಡಿಸುವಾಕಿ ನನ್ನ ಹೆತ್ತಾಕಿ...!

ಮದುವಿ ಆದ ಹನ್ನೆರಡು ವರ್ಷಕ್ಕ ತನ್ನ ಮುತ್ತೈದೆ ತನಾ ಕಳ್ಕೊಂಡಾಕಿ
ತಾ ಹೆತ್ತ ಮೂರು ಮಕ್ಳ ಮುತ್ತಿನಂಗ ಸಾಕಿದಾಕಿ
ನಮನ್ನ ಬೆಳಸಾಕ ತನ್ನ ಜೀವಾ ತೆದಾಕಿ
ಯಾ ದೇವರಗಿಂತ ಏನ ಕಮ್ಮಿ ಇಲ್ಲ ರಿ ನನ್ನ ಹೆತ್ತಾಕಿ...!

ಇಷ್ಟ ಬೆಳದ ನಿಂತ್ರು ಇನ್ನು ಆಂಜತಿ ಬಾ ಅಂತ ತನ್ನ ತೋಳವ್ಯಾಗ
ಮಲ್ಗುಸಗೋಳಾಕಿ



ನಾ ಸಿಟ್ಟಿಲೇ ಮಾತಾಡಿರ ಸಾಕ್ ಅಳಾರಂಗ
ಮಾರಿ ಮಾಡಕಿ
ನನ್ನ ಖುಷ್ಯಾಗ ತನ್ನ ನೋವು ಮರ್ತಾಕಿ
ಹಿಂತಾಕಿ ರಿ ನನ್ನ ಹೆತ್ತಾಕಿ...!

**– ಪೂಜಾ ಗ ಗೊರವನಕೊಳ್ಳ**
ಕಾನೂನು ವಿದ್ಯಾರ್ಥಿ ಧಾರವಾಡ

## ಶಾಲೆಗಳಲ್ಲಿ ಉತ್ತಮ ವಾತಾವರಣ ನಿರ್ಮಿಸಿ




**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಶಾಲೆಯ ಅಭಿವೃದ್ಧಿಯ ದೃಷ್ಟಿಯಿಂದ ಸಮುದಾಯದ ಸಹಕಾರ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಶಾಲೆಗಳಲ್ಲಿರುವ ಮೇಲುಸ್ತುವಾರಿ ಸಮಿತಿಯವರು ಇದಕ್ಕೆ ಹೆಚ್ಚು ಆದ್ಯತೆ ನೀಡಿ ಶಾಲೆಗಳಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗುವಂತೆ ಮಾಡುವುದು ಅವಶ್ಯವಾಗಿದೆ ಎಂದು ಪುರಸಭೆ ಸದಸ್ಯೆ ಅಶ್ವಿನಿ ಅಂಕಲಕೋಟಿ ಹೇಳಿದರು.

ಅವರು ಗುರುವಾರ ಪಟ್ಟಣದ ಶ್ರೀ ಸೋಮೇಶ್ವರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ.3ರಲ್ಲಿ 2023–24ನೇ ಸಾಲಿನಿಂದ ಮೂರು ವರ್ಷದ ಅವಧಿಗೆ ಆಯ್ಕೆಯಾದ ಹೊಸ ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿಯ ನೂತನ ಪದಾಧಿಕಾರಿಗಳಿಗೆ ಹಮ್ಮಿಕೊಂಡಿದ್ದ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಿವಲಿಂಗಪ್ಪ ಗುಡಗೇರಿ ಮಾತನಾಡಿ, ನಮ್ಮ ದೇಶದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಶಿಕ್ಷಣ ನೀಡುವ ಜವಾಬ್ದಾರಿ ಶಿಕ್ಷಕರ ಹೆಗಲ ಮೇಲಿದೆ ಎಂದರು. ಮುಖ್ಯೋಪಾಧ್ಯಾಯ ಎಲ್.ಎ.ನಡುವಿನಮನಿ ಅಧ್ಯಕ್ಷತೆ ವಹಿಸಿದ್ದರು. ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸೋಮಪ್ಪ ಮಾಗಡಿ, ಉಪಾಧ್ಯಕ್ಷರಾಗಿ ಸರೋಜಾ ಕಳ್ಳಿಮನಿ ಮತ್ತು ಸದಸ್ಯರು ಹಾಜರಿದ್ದರು.

ಇದೇ ಸಂದರ್ಭದಲ್ಲಿ ಶಾಲೆಗೆ ಡೆಸ್ಕ್‌ಗಳನ್ನು ಸಿದ್ಧಪಡಿಸಿದ ಶಿರಾಜಅಹ್ಮದ್ ತಾಡಪತ್ರಿ ಮತ್ತು ಶಾಲೆಗೆ ಸ್ಪೀಕರ್ ಸೆಟ್ ಕೊಡುಗೆ ನೀಡಿದ ಎಮ್.ಎಮ್. ಕಳಸೂರರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಿಆರ್‌ಪಿ ಸತೀಶ ಬೋಮಲೆ ಪ್ರಾಸ್ತಾವಿಕವಾಗಿ ಮಾತನಾಡಿದರು. ರಮೇಶ ಸವಣೂರ, ಲಲಿತಾ ಸುಣಗಾರ, ಖಾದರಸಾಬ್ ಹೊಸಮನಿ, ಅನ್ವರ್ ಭಾಷಾ ಡಾಲಾಯತ್, ನೀಲಮ್ಮ ಹೊಟ್ಟಿ, ಸಲ್ಮಾಬಾನು ಸಂಶಿ, ಶಿಕ್ಷಕರಾದ ಎಲ್.ಎ. ನಡುವಿನಮನಿ, ರಮೇಶ ಮಾಂಡ್ರೆ, ಜೆ.ಎಸ್. ಹುಲ್ಲಣ್ಣವರ, ಜಿ.ಎಚ್. ಮಾಣಿಕ, ಎಂ.ಎಂ. ಕಳಸೂರ, ಅಂಗನವಾಡಿ ಕಾರ್ಯಕರ್ತೆಯರಾದ ಭಾಗೀರಥಿ ಸಾತಪುತೆ, ಎ.ಎಸ್. ಹೆಬ್ಬಾಳ ಮತ್ತು ಶಾಲೆಯ ಮಕ್ಕಳು ಹಾಜರಿದ್ದರು. ರಮೇಶ ಮಾಂಡ್ರೆ ನಿರೂಪಿಸಿದರು.

## ಪಂ. ಪುಟ್ಟರಾಜ ಗವಾಯಿಗಳವರ ಕಾರ್ತಿಕೋತ್ಸವ



**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಶ್ರೀ ಪುಟ್ಟರಾಜ ಸರ್ಕಲ್‌ನಲ್ಲಿ ಶ್ರೀ ಪಂ. ಪುಟ್ಟರಾಜ ಸಮಾಜ ಸೇವಾ ಟ್ರಸ್ಟ್ ವತಿಯಿಂದ ಡಾ. ಶ್ರೀ ಪಂ. ಪುಟ್ಟರಾಜ ಗವಾಯಿಗಳವರ ಕಾರ್ತಿಕೋತ್ಸವ ಕಾರ್ಯಕ್ರಮವನ್ನು ಇತ್ತೀಚೆಗೆ ಹಮ್ಮಿಕೊಳ್ಳಲಾಗಿತ್ತು.

ಟ್ರಸ್ಟಿನ ಅಧ್ಯಕ್ಷ ಶಿದ್ರಾಮಯ್ಯ ಕಟಗಿಹಳ್ಳಿಮಠ, ಉಪಾಧ್ಯಕ್ಷ ಬಸವನಗೌಡ ಪಾಟೀಲ, ಸದಸ್ಯರುಗಳಾದ ಗಂಗಾಧರ ಬೆಣಕಲ್, ಬಸವರಾಜ ಡಾವಣಗೇರಿ, ಮಹಾಂತೇಶ ಲಗಳಿ, ಈಶಪ್ಪ ಅಂಗಡಿ, ಭೀಮಪ್ಪ ಮುಕಾಶಿ, ಮಂಜುನಾಥ ಕ್ಯಾಡದ, ಶಿವಪ್ಪ ಲಗಳಿ, ಪಟ್ಟದಕಲ್ಲು, ಸುನೀಲ ಚಿನ್ನಾಪೂರ, ರಾಜು ಕೊಟ್ಟೂರಶೆಟ್ಟರ, ಬಸವರಾಜ ದೊಡ್ಡಮನಿ, ಸಿದ್ಧಲಿಂಗಸ್ವಾಮಿ ಹಿರೇಗೌಡರ, ಮಂಜುನಾಥ ಕೊರ್ಲಹಳ್ಳಿ, ಮಲ್ಲು ಬೆಣ್ಣಿ ಮುಂತಾದವರು ಪಾಲ್ಗೊಂಡಿದ್ದರು.

# ಭಯ, ನಿಷ್ಕಾಳಜಿ ತೊರೆದು ಹಕ್ಕು ಚಲಾಯಿಸಿ

▶▶ಮೊದಲನೇ ಪುಟದಿಂದ

ವಿದ್ಯುನ್ಮಾನ ಮತಯಂತ್ರ ಹಾಗೂ ವಿ.ವಿ ಪ್ಯಾಟ್ ಮತಯಂತ್ರಗಳು ಮತದಾನ ಪ್ರಕ್ರಿಯೆಯಲ್ಲಿ ವಿಶ್ವಾಸಾರ್ಹತೆಯನ್ನು ಮೂಡಿಸಲಿವೆ. ಯಾವುದೇ ಅಂಜಿಕೆ, ಭಯ, ನಿಷ್ಕಾಳಜಿ ತೋರದೆ, ಪ್ರತಿ ಅರ್ಹ ಮತದಾರನೂ ಮತಗಟ್ಟೆಗೆ ಆಗಮಿಸಿ ತನ್ನ ಹಕ್ಕನ್ನು ಚಲಾಯಿಸಬೇಕು ಎಂದರು.

ಮಾಸ್ಟರ್ ಟ್ರೇನರ್ ಬಸವರಾಜ ಗಿರಿತಿಮ್ಮಣ್ಣವರ ಮಾತನಾಡಿ, ಚುನಾವಣೆಯ ಹಿನ್ನೆಲೆಯಲ್ಲಿ ಪ್ರತೀ ಮತಗಟ್ಟೆಯಲ್ಲಿ ವಿದ್ಯುನ್ಮಾನ ಮತಯಂತ್ರ (ಇ.ವಿ.ಎಂ) ಹಾಗೂ ವಿ.ವಿ ಪ್ಯಾಟ್ ಪೆಟ್ಟಿಗೆ ಇಡಲಾಗುತ್ತದೆ.

ಮತದಾರ ಮತಗಟ್ಟೆಗೆ ಮತ ಚಲಾಯಿಸಲು ಬಂದಾಗ ಮತಯಂತ್ರದಲ್ಲಿ ಹಸಿರು ದೀಪ ಉರಿಯುತ್ತಿರುವದನ್ನು ಖಚಿತಪಡಿಸಿಕೊಂಡು ಬ್ಯಾಲೆಟ್ ಯುನಿಟ್‌ನಲ್ಲಿ ತಮ್ಮ ಆಯ್ಕೆಯ ಅಭ್ಯರ್ಥಿಯ ಹೆಸರು, ಚಿಹ್ನೆಯ ಎದುರು ಇರುವ ನೀಲಿ ಗುಂಡಿ ಒತ್ತುವ ಮೂಲಕ ತಮ್ಮ ಹಕ್ಕನ್ನು ಚಲಾಯಿಸಬೇಕು.

ನಂತರ ಕೆಂಪು ದೀಪ ಹಾಗೂ ಬೀಪ್ ಸದ್ದು ಮತದಾನವಾಗಿರುವದನ್ನು ಖಚಿತಪಡಿಸುತ್ತದೆ.

ಬಳಿಕ ಪಕ್ಕದಲ್ಲಿರುವ ವಿ.ವಿ ಪ್ಯಾಟ್ ಯಂತ್ರದಲ್ಲಿ ತಾವು ಮತ ಚಲಾಯಿಸಿದ ಅಭ್ಯರ್ಥಿಯ ಕ್ರಮಸಂಖ್ಯೆ, ಹೆಸರು ಹಾಗೂ ಚಿಹ್ನೆಯನ್ನು ಒಳಗೊಂಡಿರುವ ಚೀಟಿಯನ್ನು ಏಳು ಸೆಕೆಂಡವರೆಗೆ ಮತದಾರ ನೋಡಿ ಮತದಾನವನ್ನು ಖಚಿತಪಡಿಸಿಕೊಳ್ಳಬಹುದಾಗಿದೆ ಎಂದು ನೆರೆದ ಜನಸಾಮಾನ್ಯರಿಗೆ ಹಾಗೂ ಸಿಬ್ಬಂದಿಗಳಿಗೆ ವಿವರಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ.ಎಂ ಸೇರಿದಂತೆ ಜಿಲ್ಲಾಧಿಕಾರಿಗಳ ಕಚೇರಿಯ ಶಿರಸ್ತೇದಾರರು, ಸಿಬ್ಬಂದಿಗಳು, ಕಾಲೇಜು ಪ್ರಾಂಶುಪಾಲರು, ಸಾರ್ವಜನಿಕರು ಹಾಜರಿದ್ದರು.

### ಕಲ್ಯಾಣಸಿರಿ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿ ಒಕ್ಕೂಟ, ಎನ್.ಎಸ್.ಎಸ್. ಚಟುವಟಿಕೆಗಳ ಉದ್ಘಾಟನೆ

# ಕಲಿಕೆಯ ನಿಷ್ಠೆಯೊಂದಿಗೆ ಗುರಿ ತಲುಪಿ

■ವಿಜಯಸಾಕ್ಷಿ ಸುದ್ದಿ, ಗದಗ

ವಿದ್ಯಾರ್ಥಿಗಳು ಯಾವುದೇ ದುಶ್ಚಟಗಳಿಗೆ, ದುರ್ಮಾರ್ಗಗಳಿಗೆ ಬಲಿಯಾಗದೇ ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕು. ಶಿಕ್ಷಣವೆಂದರೆ ಬರಿಯ ಓದು-ಬರಹದ ಮೂಲಕ ಜ್ಞಾನ ಗಳಿಸುವುದಷ್ಟೇ ಅಲ್ಲ, ಕಲಿಕೆಯಲ್ಲಿ ನಿಷ್ಠೆ ಇಟ್ಟುಕೊಂಡು ಅಚಲವಾದ ಗುರಿಯನ್ನು ತಲುಪುವುದು ಮತ್ತು ನಮ್ಮ ಕಲಿಕೆಗೆ ಆಸರೆಯಾಗಿರುವ ಗುರು-ಹಿರಿಯರನ್ನು ಗೌರವದಿಂದ ಕಾಣುವಂತೆ ಮಾಡುವುದು ನಿಜವಾದ ಶಿಕ್ಷಣವಾಗಿದೆ ಎಂದು ಜಿ.ಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇಲ್ಲಿನ ಕಲ್ಯಾಣಸಿರಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿ ಒಕ್ಕೂಟ ಮತ್ತು ಎನ್.ಎಸ್.ಎಸ್. ಚಟುವಟಿಕೆಗಳನ್ನು ಉದ್ಘಾಟಿಸಿ ಅವರು ಮಾತನಾಡಿ, ವಿದ್ಯಾರ್ಥಿಗಳು ಕಲಿಕಾ ನಿಷ್ಠೆ, ವಿನಯಶೀಲ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸಮಾಜಕ್ಕೆ ಮತ್ತು ದೇಶಕ್ಕೆ ಗೌರವವನ್ನು ತರಬೇಕು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪ್ರಾ. ಬಿ.ಬಿ. ಗೌಡರ ಮಾತನಾಡಿ, ಐದು ವರ್ಷಗಳನ್ನು ಪೂರ್ಣಗೊಳಿಸಿದ ತಮ್ಮ ಸಂಸ್ಥೆ ಅಲ್ಪಾವಧಿಯಲ್ಲಿ 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಮಟ್ಟದ ಮತ್ತು ರಾಷ್ಟ್ರಮಟ್ಟದ ಕ್ರೀಡಾಪಟುಗಳನ್ನು ಸಜ್ಜುಗೊಳಿಸಿದೆ. ಶೇ.95ರಷ್ಟು ಫಲಿತಾಂಶ ಸಾಧಿಸಿ, ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಮನೋಭಾವ ಬೆಳೆಸಿದೆ. ಉನ್ನತ ಸ್ಥಾನಗಳಿಗೆ ಮತ್ತು ವ್ಯಾಸಂಗಕ್ಕೆ ಅಣಿಗೊಳಿಸಲು ಸಕಲ ರೀತಿಯ ಕಾರ್ಯಗಳನ್ನು ಹಮ್ಮಿಕೊಂಡಿದೆ ಎಂದರು.




ಅತಿಥಿಗಳನ್ನು ಪರಿಚಯಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಕಾಲೇಜಿನ ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯರಾದ ಪ್ರೊ. ಬಿ.ಎಂ. ನದ್ದಿಮುಲ್ಲಾ, ಸಂಸ್ಥೆ ನಡೆದು ಬಂದ ದಾರಿ ಮತ್ತು ಇಂದು ಪ್ರಗತಿಯತ್ತ ಮುನ್ನಡೆದಿರುವುದನ್ನು ಸಭೆಗೆ ತಿಳಿಸಿದರು. ಕಾರ್ಯಕ್ರಮದಲ್ಲಿ 2022-23ನೇ ಸಾಲಿನಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅತಿಥಿಗಳು ಸನ್ಮಾನಿಸಿದರು. ವೇದಿಕೆಯ ಮೇಲೆ ಆಡಳಿತ ಮಂಡಳಿ ಸದಸ್ಯರಾದ ಗೀತಾ ಸಂಗಮದವರ, ವಿದ್ಯಾರ್ಥಿ ಒಕ್ಕೂಟದ ಉಪಾಧ್ಯಕ್ಷರಾದ ಪ್ರೊ. ವೈಶಾಲಿ ಉಮಚಗಿ ಹಾಗೂ ಕಾಲೇಜಿನ ಪ್ರಧಾನ ಕಾರ್ಯದರ್ಶಿ ಕುಮಾರ ಚಂದ್ರಕಾಂತ ದೊಡ್ಮನಿ ಉಪಸ್ಥಿತರಿದ್ದರು.

ಕಾರ್ಯಕ್ರಮವು ಭಾಗ್ಯ ಸಾಲಿ ಹಾಗೂ ಸಂಗಡಿಗರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಪ್ರೊ. ಮಾರುತಿ ಶಿರುಂದ ಸ್ವಾಗತಿಸಿದರು. ಪ್ರೊ. ರೇಣುಕಾ ನವಲಗುಂದ ಕಾರ್ಯಕ್ರಮ ನಿರೂಪಿಸಿದರು. ಪ್ರೊ. ಶಶಿಕಲಾ ಉಮ್ಮಣ್ಣವರ ವಂದಿಸಿದರು.

ಜಿಲ್ಲಾ ಸಮಾಜಕ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಪ್ರಶಾಂತ ವರಗಪ್ಪನವರ ಮಾತನಾಡಿ, ಸಾಧನೆ ಮಾಡಲು ಕಠಿಣ ಪರಿಶ್ರಮ ಅಗತ್ಯವಿದ್ದು, ವಿದ್ಯಾರ್ಥಿಗಳು ಕ್ಷಣಿಕವಾದ ಅಲ್ಪ ಹವ್ಯಾಸವನ್ನು ರೂಢಿಸಿಕೊಳ್ಳಬಾರದು. ವಿದ್ಯಾರ್ಥಿ ಜೀವನವೆಂದರೆ ಅದೊಂದು ಸಾಧನೆಯ ಮಾರ್ಗವಾಗಿದೆ. ತಪಸ್ಸಿನಂತೆ ಜ್ಞಾನಾರ್ಜನೆ ಮಾಡಿ, ಉನ್ನತ ಸಾಧನೆ ಕೈಗೊಂಡು, ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕಲ್ಲದೆ, ವಿದ್ಯಾರ್ಥಿಗಳು ಜನಮೆಚ್ಚುವ ರೀತಿಯಲ್ಲಿ ಉನ್ನತ ಮಟ್ಟಕ್ಕೇರಬೇಕೆಂದರು.

### ಶ್ರೀ ದ್ಯಾಮವ್ವದೇವಿ ಜಾತ್ರಾ ಮಹೋತ್ಸವದಲ್ಲಿ ಪರಿಸರ ತಜ್ಞ ಶಿವಾನಂದ ಕಳವೆ ಉಪನ್ಯಾಸ

# ಜಲ ಸಂರಕ್ಷಣೆ ನಮ್ಮೆಲ್ಲರ ಹೊಣೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನೀರು ನಮ್ಮೆಲ್ಲರ ಜೀವನಾಡಿ. ನೀರಿಲ್ಲದೆ ಮನುಷ್ಯನ ಬದುಕನ್ನು ಊಹಿಸಲೂ ಅಸಾಧ್ಯ. ಜಲ ಸಂಪತ್ತು ಮನುಕುಲದ ಉಳಿವಿಗೆ ಅವಶ್ಯಕ ಸಂಪನ್ಮೂಲವಾಗಿದ್ದು, ಅದರ ಸಂರಕ್ಷಣೆಯ ಹೊಣೆ ನಮ್ಮೆಲ್ಲರ ಮೇಲಿದೆ ಎಂದು ಪರಿಸರ ತಜ್ಞ ಶಿವಾನಂದ ಕಳವೆ ಹೇಳಿದರು.

ಪಟ್ಟಣದ ಶ್ರೀ ದ್ಯಾಮವ್ವದೇವಿ ಜಾತ್ರಾ ಮಹೋತ್ಸವದ ನಿಮಿತ್ತ ಜರುಗಿದ 'ಜಲ ಸಂರಕ್ಷಣೆಯಲ್ಲಿ ನಮ್ಮ ಪಾತ್ರ' ವಿಷಯದ ಕುರಿತು ಅವರು ಉಪನ್ಯಾಸ ನೀಡಿದರು.

ಕಾಲುವೆ, ಗೋ ಕಟ್ಟೆ, ನದಿ ಮೂಲಗಳ ನೀರನ್ನು ಶುದ್ಧೀಕರಿಸಿ ಮರುಬಳಕೆ ಮಾಡುವ ಮತ್ತು ಅಂತರ್ಜಲ ಮಟ್ಟ ಹೆಚ್ಚಿಸುವ ಮಳೆ ನೀರು ಕೊಯ್ಲಿನಂತಹ ಯೋಜನೆಗಳತ್ತ ನಾವು ಗಮನಹರಿಸಬೇಕಿದ್ದು, ಇದು ಒಬ್ಬಿಬ್ಬರು ಮಾಡುವ ಕೆಲಸವಲ್ಲವಾದ್ದರಿಂದ ಎಲ್ಲರ ಸಹಭಾಗಿತ್ವದ ಅವಶ್ಯಕತೆಯಿದೆ. ನೀರು ಅತ್ಯಮೂಲ್ಯ ಸಂಪತ್ತು. ಅದನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ. ಕೆರೆಗಳ ಸಂರಕ್ಷಣೆ ಬಗ್ಗೆ ಜನರಲ್ಲಿ ಜಾಗೃತಿ ಕಡಿಮೆಯಾಗುತ್ತಿದೆ. ಇದರ ಪರಿಣಾಮ ಕೆರೆಗಳು ಇಲ್ಲದಂತಾಗುತ್ತಿವೆ. ಪೂರ್ವಜರು ಗ್ರಾಮಕ್ಕೊಂದು ಕೆರೆ ನಿರ್ಮಿಸುವುದರ ಹಿಂದೆ ವೈಜ್ಞಾನಿಕ ಅಂಶವಿದೆ. ಕೆರೆಯಿಂದ ಅಂತರ್ಜಲ ವೃದ್ಧಿಸುವುದರ ಜತೆಗೆ ಇಡೀ ಗ್ರಾಮಕ್ಕೆ ನೀರಿನ ಸಮಸ್ಯೆ ನೀಗುತ್ತದೆ ಎಂದರು.



ಕೊಪ್ಪಳದ ಅಯೋಧ್ಯಾ ಕ್ರಾಪ್ಸ್ ಅಕಾಡೆಮಿ ಸಂಸ್ಥಾಪಕ ಮಹಾಂತೇಶ ಪಾಟೀಲ ಸಾವಯವ ಕೃಷಿಯ ಬಗ್ಗೆ ಉಪನ್ಯಾಸ ನೀಡಿ, ಸಮಗ್ರ ಕೃಷಿ ಉತ್ಪಾದನೆಯಲ್ಲಿ ಸಾವಯವ ಕೃಷಿ ನಿರ್ವಹಣಾ ಪದ್ಧತಿ ಅಳವಡಿಸಿಕೊಳ್ಳಿ. ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಅದರೊಂದಿಗೆ ಮಣ್ಣಿನ ಫಲವತ್ತತೆ ಹಾಗೂ ಗುಣಧರ್ಮ ಕಾಪಾಡಿಕೊಂಡು ಪರಿಸರ ಸ್ನೇಹಿ, ಜೈವಿಕ ವಿಧಾನಗಳಿಂದ ಕೀಟ ಮತ್ತು ರೋಗಗಳ ನಿರ್ವಹಣೆ ಕೈಗೊಳ್ಳಿ ಎಂದರು.

ಎಂಸಿಎಸ್ ಶಾಲೆಯ 1986ನೇ ಸಾಲಿನ ಗೆಳೆಯರ ಬಳಗದವರು ಪ್ರಸಾದ ಸೇವೆಯಲ್ಲಿ ಭಾಗವಹಿಸಿದ್ದರು. ವೆಂಕಣ್ಣ ಕುಲಕರ್ಣಿ (ವೈದ್ಯ) ಅಧ್ಯಕ್ಷತೆ ವಹಿಸಿದ್ದರು. ಜಗದೀಶ ಸಂಕನಗೌಡ್ರ ಸೇರಿದಂತೆ ಇತರರಿದ್ದರು. ಕೊಟ್ರೇಶ ಅರವಟಗಿಮಠ ನಿರೂಪಿಸಿದರು. ಎ.ಸಿ. ಮರಡಿಮಠ ಸ್ವಾಗತಿಸಿದರು, ಡಾ. ಕೆ.ಜಿ. ಕಾಳೆ ವಂದಿಸಿದರು.

# ಎನ್‌ಸಿಸಿ ಅಧಿಕಾರಿ ಕಲ್ಲನಗೌಡ ಪಾಟೀಲರಿಗೆ ಸನ್ಮಾನ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಜೆ.ಟಿ. ಮಹಾವಿದ್ಯಾಲಯದಲ್ಲಿ ಇತ್ತೀಚೆಗೆ ಜರುಗಿದ ಎನ್.ಸಿ.ಸಿ ದಿನಾಚರಣೆ ಅಂಗವಾಗಿ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಸಿ.ಎಸ್. ಪಾಟೀಲ ಬಾಲಕಿಯರ ಪ್ರೌಢಶಾಲೆಯಲ್ಲಿ ಎನ್.ಸಿ.ಸಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಕಲ್ಲನಗೌಡ ಪಾಟೀಲ ಅವರನ್ನು 38 ಕರ್ನಾಟಕ ಬಟಾಲಿಯನ್ ಎನ್‌ಸಿಸಿ ಹಾಗೂ ಎನ್‌ಸಿಸಿ ಎಎನ್‌ಓ ಅಧಿಕಾರಿಗಳ ಅಸೋಸಿಯೇಷನ್ ವತಿಯಿಂದ ಸನ್ಮಾನಿಸಲಾಯಿತು.

ಕಲ್ಲನಗೌಡ ಪಾಟೀಲ ಅವರು ಮಹಾರಾಷ್ಟ್ರದ ನಾಗಪುರ ಕ್ಯಾಂಪ್‌ನ ಎನ್‌ಸಿಸಿ ಆಫೀಸರ್ಸ್ ಟ್ರೈನಿಂಗ್ ಅಕಾಡೆಮಿಯಲ್ಲಿ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿ, ಸೆಕೆಂಡ್ ಎಎನ್‌ಓ ಅಧಿಕಾರಿಯಾಗಿ ರ್‍ಯಾಂಕ್ ಪಡೆದ ಹಿನ್ನೆಲೆಯಲ್ಲಿ ಮತ್ತು ಸ್ವಚ್ಛತಾ ಅಭಿಯಾನ, ವನಮಹೋತ್ಸವ ವಿವಿಧ ಜನಜಾಗೃತಿ ರ್‍ಯಾಲಿ ಚಟುವಟಿಕೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದ ಹಿನ್ನೆಲೆಯಲ್ಲಿ ಅವರನ್ನು ಸನ್ಮಾನಿಸಲಾಯಿತು.



ಈ ಸಂದರ್ಭದಲ್ಲಿ 38 ಕರ್ನಾಟಕ ಬಟಾಲಿಯನ್ ಎನ್‌ಸಿಸಿ ಅಧಿಕಾರಿ ಸುಬೇದಾರ್ ಮೇಜರ್ ಮಲ್ಲಪ್ಪ ಬ್ಯಾಳಿ, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಜಿಲ್ಲಾಧ್ಯಕ್ಷ ಬಸಲಿಂಗಪ್ಪ ಮುಂಡರಗಿ, ಕ್ಯಾಪ್ಟನ್ ಡಾ. ಬಿ.ಎಸ್. ರಾಥೋಡ್, ಕ್ಯಾಪ್ಟನ್ ಎಸ್. ಬಿ. ಜಾದವ್, ಕ್ಯಾಪ್ಟನ್ ಕಲ್ಮಠ, ಕ್ಯಾಪ್ಟನ್ ವಸಂತ ಮೂಲಿಮನಿ, ಡಾಕ್ಟರ್ ನಾಗರಾಜ ಬಳೆಗಾರ, ಜೆಸಿಓ ಗುರಂಗ್, ಕದಂ, ಬಿಎಚ್‌ಎಂ ಅನಿಲಕುಮಾರ, ಹುಸೇನಸಾಬ್ ಕೆ.ಎಂ., ಜೆ.ಟಿ ಮಹಾವಿದ್ಯಾಲಯದ ಪ್ರಾಚಾರ್ಯ ಪಿ.ಜಿ. ಪಾಟೀಲ, ಎನ್‌ಸಿಸಿ ಅಧಿಕಾರಿ ವೈ.ಸಿ. ಕರಿಗಾರ, ವಸಂತ ವೀರಾಪುರ, ಶ್ರೀಕಾಂತ್ ಕರಡಿ, ಎಂ.ಎ. ರೇಖಾತಿ, ಎಸ್.ಜಿ. ಘೋಡಕೆ ಮುಂತಾದವರು ಉಪಸ್ಥಿತರಿದ್ದರು.



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆ ವತಿಯಿಂದ ಇಲ್ಲಿನ ಮುನ್ಸಿಪಲ್ ಹೈಸ್ಕೂಲ್ ಆವರಣದ ಸ್ವಚ್ಛತೆ ಹಾಗು ಎಸ್‌ಡಬ್ಲ್ಯೂಎಂ ಸೈಟ್ ವೀಕ್ಷಣೆ ನಡೆಸಲಾಯಿತು. ಈ ಸಂದರ್ಭದಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಅನಿಲ ಅಬ್ಬಿಗೇರಿ, ಆರೋಗ್ಯಾಧಿಕಾರಿ ಆನಂದ್ ಬದಿ, ಕೆಂಚಪ್ಪ ಪೂಜಾರ ಹಾಗೂ ಎಲ್ಲ ದಫೇದಾರುಗಳು, ಪೌರಕಾರ್ಮಿಕರು ಉಪಸ್ಥಿತರಿದ್ದರು.

# ಸುಳ್ಳು ಸುದ್ದಿ ಹರಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಿ

■ವಿಜಯಸಾಕ್ಷಿ ಸುದ್ದಿ, ಗದಗ

ದೇಶದ ಪ್ರಜೆಗಳನ್ನು ಪ್ರತಿನಿಧಿಸುವ ಪವಿತ್ರ ಸ್ಥಳವಾದ ಲೋಕಸಭೆಯಲ್ಲಿ ಕೆಲವು ಕಿಡಿಗೇಡಿಗಳು ನುಗ್ಗಿ ಆತಂಕ ಸೃಷ್ಟಿಸಿರುವ ಘಟನೆಯನ್ನು ಭಾರತ ವಿದ್ಯಾರ್ಥಿ ಫೆಡರೇಷನ್ ಗದಗ ಜಿಲ್ಲಾ ಸಮಿತಿಯು ಖಂಡಿಸುತ್ತದೆಯಲ್ಲದೆ, ಬಂಧಿತ ಆರೋಪಿಗಳನ್ನು ಕಾನೂನು ಕ್ರಮಕ್ಕೆ ಒಳಪಡಿಸಬೇಕೆಂದು ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಅಮರೇಶ ಕಡಗದ ಒತ್ತಾಯಿಸಿದರು.

ಈ ಕುರಿತು ಸಂಘಟನೆಯ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದ ರಾಜ್ಯ ಪದಾಧಿಕಾರಿ ಗಣೇಶ ರಾಠೋಡ್, ಈ ಪ್ರಕರಣದಲ್ಲಿ ವಿನಾಕಾರಣ ಎಸ್‌ಎಫ್‌ಐ ಮೈಸೂರು ಜಿಲ್ಲಾಧ್ಯಕ್ಷರಾದ ವಿಜಯ್ ಕುಮಾರ್ ಇವರ ಫೋಟೋವನ್ನು ಬಳಸಿಕೊಂಡು ಅಪಪ್ರಚಾರ ಮಾಡಲಾಗುತ್ತಿದೆ. ಹೀಗೆ ಸುಳ್ಳು ಸುದ್ದಿ ಹರಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದರು.




ಜಿಲ್ಲಾ ಉಪಾಧ್ಯಕ್ಷ ಚಂದ್ರು ರಾಠೋಡ್ ಎಸ್‌ಎಫ್‌ಐ ದಶಕಗಳಿಂದ ವಿದ್ಯಾರ್ಥಿ ಸಮುದಾಯದ ಪರವಾಗಿ ದೇಶಾದ್ಯಂತ ಹೋರಾಟ ಮಾಡುತ್ತಾ ಬರುತ್ತಿದೆ. ಇದನ್ನು ಸಹಿಸದ ಕೆಲ ಸಂಘಟನೆಗಳ ಕಾರ್ಯಕರ್ತರು ಸುಳ್ಳು ಹಬ್ಬಿಸುತ್ತಿದ್ದು, ಅವರ ಮೇಲೆ ಕಾನೂನು ಕ್ರಮ ಜರಗಿಸಬೇಕು ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಪ್ರದೀಪ್.ಎಂ, ಶರಣು.ಎಂ ಮುಂತಾದವರಿದ್ದರು.

# ಕೊಟ್ಟೂರ ಬಸವೇಶ್ವರ ದೇವಸ್ಥಾನದಲ್ಲಿ ಕಾರ್ತಿಕೋತ್ಸವ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಕೆಂಚಲಾಪುರ ಓಣಿಯ ಕೊಟ್ಟೂರ ಬಸವೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ನಿಮಿತ್ತ ಡಿ.18ರಂದು ಸಂಜೆ 6ಕ್ಕೆ ಕೊಬ್ಬರಿ ದೀಪೋತ್ಸವ ಹಮ್ಮಿಕೊಳ್ಳಲಾಗಿದೆ. ಕಾರ್ತಿಕೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ಬಳ್ಳಾರಿಯ ಕೊಟ್ಟೂರಿನಲ್ಲಿ ನಡೆಯುವಂತೆ ವಿಶೇಷ ಪೂಜೆ, ದೀಪೋತ್ಸವ ಕಾರ್ಯಕ್ರಮಗಳನ್ನು ವಿಜೃಂಭಣೆ ಮತ್ತು ಶೃದ್ಧಾ-ಭಕ್ತಿಯಿಂದ ನೆರವೇರಿಸಲಾಗುವುದು. ಸಕಲ ಭಕ್ತರು ಪಾಲ್ಗೊಳ್ಳಬೇಕೆಂದು ಭಕ್ತ ಮಂಡಳಿಯ ರಾಜು ಬುರಡಿ ತಿಳಿಸಿದ್ದಾರೆ.



## 'ಅರಳು' ಶಾಲೆಯಲ್ಲಿ ವಿಶೇಷ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ 'ಅರಳು' ವಿಶೇಷ ಅಗತ್ಯತೆಯುಳ್ಳ ಬುದ್ಧಿಮಾಂಧ್ಯ ಮಕ್ಕಳ ವಸತಿ ರಹಿತ ಶಾಲೆ ಹಾಗೂ ಬೆಂಗಳೂರಿನ ರೈಸ್ ಬಯೋನಿಕ್ಸ್ ಸಹಯೋಗದಲ್ಲಿ ಡಿ.16ರ ಬೆಳಿಗ್ಗೆ 10.30ಕ್ಕೆ ಮುಕ್ತಿಮಂದಿರ ರಸ್ತೆ ಸೋಮೇಶ್ವರ ನೂಲಿನ ಗಿರಣಿ ಕಟ್ಟಡದ ಶಾಲೆಯಲ್ಲಿ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

ಶಾಸಕ ಡಾ. ಚಂದ್ರು ಲಮಾಣಿ ಕಾರ್ಯಕ್ರಮ ಉದ್ಘಾಟಿಸುವರು. ಸಂಸ್ಥೆಯ ಅಧ್ಯಕ್ಷ ಎಸ್.ಡಿ. ಹೊಸಮನಿ ಅಧ್ಯಕ್ಷತೆ ವಹಿಸುವರು. ಮಾಜಿ ಶಾಸಕರಾದ ಜಿ.ಎಂ. ಮಹಾಂತಶೆಟ್ಟರ, ಜಿ.ಎಸ್. ಗಡ್ಡದೇವರಮಠ, ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿ ಕೆ.ಮಾಂತೇಶ, ಬಿಇಓ ಜಿ.ಎಂ. ಮುಂದಿನಮನಿ, ಪುಲಕೇಶ ಉಪನಾಳ, ಪುರಸಭೆ ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ ಸೇರಿದಂತೆ ಪುರಸಭೆ ಸದಸ್ಯರು, ಗಣ್ಯಮಾನ್ಯರು ಆಗಮಿಸುವರು ಎಂದು ಶಾಲೆಯ ಮುಖ್ಯೋಪಾಧ್ಯಾಯೆ ನೀಲಮ್ಮ ಎಂ.ದಾಸಪ್ಪನವರ ತಿಳಿಸಿದ್ದಾರೆ.


**ಪಟ್ಟಣ ಪಂಚಾಯತ ಕಾರ್ಯಾಲಯ, ಶಿರಹಟ್ಟಿ-582120**

ಕ್ರಸಂ:ಪಪಂಶಿ/15ನೇಹಸಾಮೂಅ/ಟೆಂಡರ/2023-24 ದಿನಾಂಕ:15-12-2023

**ಅಲ್ಪಾವಧಿ ಟೆಂಡರ್ ಪ್ರಕಟಣೆ ಇ-ಪ್ರೋಕ್ಯೂರಮೆಂಟ್ ಮೂಲಕ**

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಶಿರಹಟ್ಟಿ ಇವರಿಂದ ಶಿರಹಟ್ಟಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ-2000ರ ಪ್ರಕಾರ "ಇ-ಪ್ರೊಕ್ಯೂರ್‌ಮೆಂಟ್" ಪದ್ಧತಿಯಲ್ಲಿ ಸನ್ 2020-21 ಮತ್ತು 2022-23 ನೇ ಸಾಲಿನ 15ನೇ ಹಣಕಾಸು ಅನುದಾನ **ಅನುದಾನದ ಇಂಡೆಂಟ್ ನಂ-4876(SC), 4878, 7645** ಈ ಕೆಳಗೆ ನಮೂದಿಸಿದ ಕಾಮಗಾರಿಗಳ ಒಟ್ಟು ಮೊತ್ತ ರೂ. **31.13** ಲಕ್ಷ ನಿರ್ವಹಣೆಗಾಗಿ ಕೆ.ಡಬ್ಲ್ಯು-1 & 2 ದಸ್ತಾವೇಜ್‌ನಲ್ಲಿ ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಹಾಗೂ ಇಂದನ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಪ್ರೋಕ್ಯೂರಮೆಂಟ್ ದಾಖಲೆಗಳಿಗಾಗಿ https://kppp.karnataka.gov.in/#/portal/portal-home ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ ಸಲ್ಲಿಸುವುದು. (1) ಇ-ಪ್ರೊಕ್ಯೂರಮೆಂಟ್ ಪದ್ಧತಿಯಲ್ಲಿ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **22-12-2023** ಸಂಜೆ 5-30ರ ವರೆಗೆ (2) ಟೆಂಡರನ್ನು ತೆರೆಯುವ ದಿನಾಂಕ ಮತ್ತು ಸಮಯ : **26-12-2023** ರಂದು ಸಾಯಂಕಾಲ 5-30 ಗಂಟೆಗೆ.

ನಿಗಧಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಯಾವುದೇ ತಿದ್ದುಪಡಿಗಳನ್ನು ಪತ್ರಿಕಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ. ಕಾಮಗಾರಿ ಇ.ಎಮ್.ಡಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಛೇರಿಯ ವೆಬ್‌ಸೈಟ್ **www.shirahattitown.gov.in.** ಹಾಗೂ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ-ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

| | |
|---|---|
| **ಸಹಿ/- ಶ್ರೀ ಸಿದ್ದರಾಯ ಕಟ್ಟಿಮನಿ**<br>**ಮುಖ್ಯಾಧಿಕಾರಿ**<br>**ಪಟ್ಟಣ ಪಂಚಾಯತ ಶಿರಹಟ್ಟಿ** | **ಸಹಿ/- ಶ್ರೀ ಅನೀಲ ಬಡಿಗೇರ**<br>**ಆಡಳಿತಾಧಿಕಾರಿಗಳು**<br>**ಪಟ್ಟಣ ಪಂಚಾಯತ ಶಿರಹಟ್ಟಿ** |

ವಾಸಾಸಂಇ/ಗದಗ/ಕೆಎಸ್‌ಎಂಸಿಎ/375/2023-24


# ಬಸವೇಶ್ವರ ನಗರಕ್ಕೆ ಇನ್ನೂರರ ಸಡಗರ: ಪೂರ್ವಭಾವಿ ಸಭೆ

■ವಿಜಯಸಾಕ್ಷಿ ಸುದ್ದಿ, ಗದಗ

ಈಗಿನ ಬಸವೇಶ್ವರ ನಗರವು(ಶಹಪೂರ ಹಳ್ಳಿ ಹಾಗೂ ಶಹಪೂರ ಪೇಟೆ) ಬರುವ 2024ಕ್ಕೆ 200 ವರ್ಷಗಳನ್ನು ಪೂರೈಸಲಿದೆ. ಬಣಗಾರ ಸಮಾಜದ 21 ಮನೆತನದವರು ತೋಂಟದಾರ್ಯ ಮಠದ 13ನೇ ಪೀಠಾಧಿಪತಿಗಳಾಗಿದ್ದ ಮನ್ನಿರಂಜನ ಜಗದ್ಗುರು ತೋಂಟದ ಮಹಾಂತ ಸ್ವಾಮಿಗಳ ಮಾರ್ಗದರ್ಶನದ ಮೇರೆಗೆ ಬೆಟಗೇರಿಯಿಂದ ಗದುಗಿಗೆ ಬಂದು ನೆಲೆಸಿ, ಶಹಪೂರ ಹಳ್ಳಿ ಎಂದು ನಾಮಕರಣ ಮಾಡಿಕೊಂಡರು.

ಈ ಓಣಿಯ ನಾಗರಿಕರಲ್ಲಿ ಶರಣ ತತ್ವ ಚಿಂತನೆ, ಸಂಸ್ಕೃತಿ-ಸಂಸ್ಕಾರಗಳಿರುವುದನ್ನು ಮನಗಂಡು 13-05-1992 ರಲ್ಲಿ ಈ ಓಣಿಗೆ ಬಸವೇಶ್ವರ ನಗರ ಎಂದು ಮರು ನಾಮಕರಣ ಮಾಡಲಾಯಿತು. ಈ ಹಿನ್ನೆಲೆಯಲ್ಲಿ ಶಹಪೂರಪೇಟೆಗೆ 200 ವರ್ಷಗಳು ಪೂರೈಸಿದ್ದು, ತನ್ನಿಮಿತ್ತ ಹಲವಾರು ಕಾರ್ಯಕ್ರಮಗಳ ಮೂಲಕ ವಿಜೃಂಭಣೆಯಿಂದಆಚರಿಸಲು ಓಣಿಯ ನಿವಾಸಿಗಳು ನಿಶ್ಚಯಿಸಿದ್ದಾರೆ.

ಈ ಸಂಭ್ರಮಾಚರಣೆಯ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನು ಡಿ.17ರ ಸಂಜೆ 6 ಗಂಟೆಗೆ ಬಸವೇಶ್ವರ ನಗರದ ಶ್ರೀ ಶಂಕರಲಿಂಗ ದೇವಸ್ಥಾನದ ಆವರಣದಲ್ಲಿ ಕರೆಯಲಾಗಿದೆ. ಬಸವೇಶ್ವರ ನಗರದ ಸಾರ್ವಜನಿಕರು ಹಾಗೂ ಶಹಪೂರ ಪೇಟೆ ಅಭಿಮಾನಿಗಳು ಈ ಸಭೆಗೆ ಆಗಮಿಸಿ ತಮ್ಮ ಸಲಹೆ-ಸೂಚನೆಗಳನ್ನು ತಿಳಿಸಬೇಕೆಂದು ದ್ವಿಶತಮಾನೋತ್ಸವ ಸಮಿತಿ ಸದಸ್ಯರಾದ ವಿಶ್ವನಾಥ ಶೀರಿ, ಮಹಾಂತೇಶ ಕಾತರಕಿ, ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದು, ಹೆಚ್ಚಿನ ಮಾಹಿತಿಗಾಗಿ-9916190125, 9036646025, 9972614449, 9341153344, 9844543670, 9035195995 ಸಂಪರ್ಕಿಸುವಂತೆ ಕೋರಿದ್ದಾರೆ.

# ವಿದ್ಯುತ್ ಚಾಲಿತ ಮಗ್ಗಗಳಿಗೆ ಉಚಿತ ವಿದ್ಯುತ್

■ವಿಜಯಸಾಕ್ಷಿ ಸುದ್ದಿ, ಬೆಳಗಾವಿ-ಸುವರ್ಣಸೌಧ

1ರಿಂದ 10 ಹೆಚ್.ಪಿ. ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಚಾಲಿತ ಮಗ್ಗ ಘಟಕಗಳಿಗೆ ಉಚಿತವಾಗಿ ವಿದ್ಯುತ್ ಪೂರೈಸಿ ಶೂನ್ಯ ಬಿಲ್ ನೀಡಲಾಗುವುದು. ಈ ಕುರಿತು ಸರ್ಕಾರ ಈಗಾಗಲೇ ಆದೇಶ ಹೊರಡಿಸಿದೆ ಎಂದು ಜವಳಿ, ಕಬ್ಬು, ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ್ ಪಾಟೀಲ್ ಹೇಳಿದರು.

ಬೆಳಗಾವಿ ಚಳಿಗಾಲದ ಅಧಿವೇಶನಲ್ಲಿ ಶುಕ್ರವಾರ ಪ್ರಶ್ನೋತ್ತರ ಕಲಾಪದಲ್ಲಿ ಶಾಸಕರ ಪ್ರಶ್ನೆಗಳಿಗೆ ಉತ್ತರಿಸಿ ಅವರು ಮಾತನಾಡಿದರು. 10ಕ್ಕಿಂತ ಹೆಚ್ಚು ಹಾಗೂ 20 ಹೆಚ್.ಪಿವರೆಗಿನ ವಿದ್ಯುತ್ ಮಗ್ಗಗಳ 500 ಯುನಿಟ್‌ವರೆಗಿನ ವಿದ್ಯುತ್ ಬಳಕೆಗೆ ಪ್ರತಿ ಯುನಿಟ್‌ಗೆ ರೂ.1.25 ರಿಯಾಯಿತಿ ನೀಡಲಾಗುವುದು. ಜವಳಿ ಘಟಕಗಳ ಸ್ಥಾಪನೆಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಘಟಕ ಯೋಜನಾ ವೆಚ್ಚದ ಮೇಲೆ ಶೇ.75ರಷ್ಟು ಅಥವಾ ಗರಿಷ್ಠ ಬಂಡವಾಳ ಸಹಾಯಧನ ರೂ.2 ಕೋಟಿವರೆಗೆ ನೀಡಲಾಗುತ್ತಿದೆ. ನೂತನ ಜವಳಿ ನೀತಿ ಅನ್ವಯ ಗರಿಷ್ಠ ರೂ.75 ಲಕ್ಷಗಳ ಅವಧಿ ಸಾಲದ ಮೇಲೆ ಮೊದಲ 5 ವರ್ಷಗಳ ಅವಧಿಗೆ ಬಡ್ಡಿ ಸಹಾಯಧನ ಒದಗಿಸಲಾಗುತ್ತಿದೆ ಎಂದರು.

# 'ವಚನ ದರ್ಶನ: ಭಕ್ತಿ-ಕಾಯಕ ದಾಸೋಹ' ಸಮ್ಮೇಳನ ನಾಳೆಯಿಂದ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಗ್ರಾಮೀಣ ಪರಿವರ್ತನೆಯತ್ತ ಹಲವಾರು ಹೆಜ್ಜೆಗಳನ್ನು ಇಡುತ್ತಿದ್ದು, ಗ್ರಾಮೀಣ ಬದುಕಿಗೆ ನೇರವಾಗಿಯೇ ಸಂಬಂಧ ಹೊಂದಿರುವ ವಚನ ಸಾಹಿತ್ಯದ ಜ್ಞಾನವನ್ನು ಎಲ್ಲಡೆ ಪಸರಿಸಬೇಕೆಂಬ ಉದ್ದೇಶದಿಂದ ವಿಶ್ವವಿದ್ಯಾಲಯವು 'ವಚನ ದರ್ಶನ: ಭಕ್ತಿ-ಕಾಯಕ-ದಾಸೋಹ' ಎಂಬ ವಿಷಯದ ಕುರಿತು ಮೂರು ದಿನಗಳ ಸಮ್ಮೇಳನವನ್ನು ಡಿ.17ರಿಂದ ಡಿ.19ರವರೆಗೆ ಕ್ಯಾಂಪಸ್ ಆವರಣದಲ್ಲಿ ಆಯೋಜಿಸಿದೆ.

ಈ ಕ್ಷೇತ್ರದಲ್ಲಿ ಕೃಷಿ ಮಾಡಿರುವ ಪೂಜನೀಯರು ಹಾಗೂ ವಿದ್ವಾಂಸರು ಸಮ್ಮೇಳನಕ್ಕೆ ಆಗಮಿಸಿ ವಚನಾಮೃತವನ್ನು ಎಲ್ಲರಿಗೂ ಉಣಬಡಿಸಲಿದ್ದಾರೆ. ಅದರ ಸವಿಯನ್ನು ಸವಿಯಲು ಸಮ್ಮೇಳನಕ್ಕೆ ನೋಂದಣಿ ಆಗುವ ಮೂಲಕ ಭಾಗವಹಿಸುವ ಅವಕಾಶವಿದೆ. ಪ.ಪೂ. ಶ್ರೀ ಡಾ. ಸಿದ್ಧರಾಮ ಮಹಾಸ್ವಾಮಿಗಳು, ತೋಂಟದಾರ್ಯ ಮಠ, ಗದಗ, ಪ.ಪೂ. ಶ್ರೀ ಮಾದಾರ ಚನ್ನಯ್ಯ ಸ್ವಾಮಿಗಳು, ಚಿತ್ರಗುರ್ಗ, ಪ.ಪೂ ಶ್ರೀ ಸದಾಶಿವಾನಂದ ಸ್ವಾಮಿಗಳು, ಶಿವಾನಂದ ಮಠ, ಸಂಗಮೇಶ ಸವದತ್ತಿ ಮಠ, ಡಾ. ಯಲ್ಲಪ್ಪ ಮಾರುತಿ ಭಜಂತ್ರಿ, ಡಾ. ಬಿ.ವಿ ವಸಂತಕುಮಾರ್, ಗೋವಿಂದಪ್ಪ ಗೌಡಪ್ಪಗೋಳ, ಪ್ರೊ. ರಾಜಾರಾಮ ಹೆಗಡೆ, ಪ್ರೊ. ಕೆ. ರವೀಂದ್ರನಾಥ ಹೀಗೆ ಹತ್ತು ಹಲವು ಸಂಪನ್ಮೂಲ ವ್ಯಕ್ತಿಗಳು ಸಮ್ಮೇಳನಕ್ಕೆ ಆಗಮಿಸಿ ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ. ಪ್ರಸ್ತುತ ಸಮ್ಮೇಳನದಲ್ಲಿ ವಿಷಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

### ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಅಷ್ಟಸೂತ್ರ ಘೋಷಿಸಿದ ಸಿಎಂ ಸಿದ್ದರಾಮಯ್ಯ

# ನಂಜುಂಡಪ್ಪ ವರದಿ ಅನುಷ್ಠಾನಕ್ಕೆ ಕ್ರಮ

■ವಿಜಯಸಾಕ್ಷಿ ಸುದ್ದಿ, ಬೆಳಗಾವಿ-ಸುವರ್ಣಸೌಧ

ನಮ್ಮ ಸರಕಾರ ಯಾವ ಪ್ರದೇಶವನ್ನೂ ತಾರತಮ್ಯದಿಂದ ನೋಡುವ ಪ್ರಶ್ನೆಯೇ ಇಲ್ಲ. ಎಲ್ಲ ಪ್ರದೇಶಗಳನ್ನು ಒಂದೇ ರೀತಿಯಲ್ಲಿ ಪರಿಗಣಿಸಿ ಅಭಿವೃದ್ಧಿಪಡಿಸಲಿದೆ. ಉತ್ತರ ಕರ್ನಾಟಕದ ಜೊತೆಗೆ ಇಡೀ ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ನಮ್ಮ ಸರಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಅಷ್ಟಸೂತ್ರಗಳನ್ನು ಶುಕ್ರವಾರ ವಿಧಾನಸಭೆಯಲ್ಲಿ ಘೋಷಿಸಿ ಮಾತನಾಡಿದ ಅವರು, ಪ್ರಾದೇಶಿಕ ಅಸಮತೋಲನ ನಿವಾರಿಸುವ ಮತ್ತು ತಾರತಮ್ಯ ತಗ್ಗಿಸುವ ಉದ್ದೇಶದಿಂದ ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಡಿ.ಎಂ. ನಂಜುಂಡಪ್ಪ ವರದಿಯ ಅನುಷ್ಠಾನ ಹಾಗೂ ಅದರ ಫಲಶ್ರುತಿಯನ್ನು ಅಧ್ಯಯನ ಮಾಡಲು ನುರಿತ ಅರ್ಥಶಾಸ್ತ್ರಜ್ಞರೊಬ್ಬರ ಅಧ್ಯಕ್ಷತೆಯಲ್ಲಿ ಕಮಿಟಿಯನ್ನು ರಚಿಸಲಾಗುವುದು.

ನಂಜುಂಡಪ್ಪ ವರದಿ ಸಲ್ಲಿಕೆಯಾಗಿ 21 ವರ್ಷಗಳಾದವು. ಈ ವರದಿಯನ್ನಾಧರಿಸಿ ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ



ಮಂಡಳಿ ಮೂಲಕ ಇದುವರೆಗೆ 61,330 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಿದೆ. ಸುಮಾರು 42 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ವಿಶೇಷ ಅಭಿವೃದ್ಧಿ ಯೋಜನೆಯಡಿಯೇ 32433.43 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಇದರ ಜೊತೆಯಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿ ವತಿಯಿಂದಲೂ ಅನುದಾನಗಳನ್ನು ಒದಗಿಸಲಾಗಿದೆ. ಇಷ್ಟೆಲ್ಲ ಮಾಡಿದರೂ ಮಾನವ ಅಭಿವೃದ್ಧಿ ಸೂಚ್ಯಂಕವು ನಿರೀಕ್ಷಿತ ಮಟ್ಟದಲ್ಲಿ ಸುಧಾರಿಸುತ್ತಿಲ್ಲ. ಶಿಕ್ಷಣ, ಆರೋಗ್ಯ, ಆದಾಯ ಗಳಿಕೆ ಮುಂತಾದವುಗಳಲ್ಲಿ ಹಿನ್ನಡೆಯನ್ನು ಈ ಜಿಲ್ಲೆಗಳು ಅನುಭವಿಸುತ್ತಿವೆ. ಹಾಗಾಗಿ ವಿಶೇಷವಾಗಿ ನಂಜುಂಡಪ್ಪನವರ ವರದಿಯ ಅನುಷ್ಠಾನ ಹಾಗೂ ಅದರ ಫಲಶ್ರುತಿಯನ್ನು ಅಧ್ಯಯನ ಮಾಡಲು ಕಮಿಟಿಯನ್ನು ರಚಿಸಲಾಗುವುದು ಎಂದರು.

ಸದರಿ ಸಮಿತಿಗೆ 6 ತಿಂಗಳೊಳಗೆ ವರದಿ ನೀಡುವಂತೆ ಸೂಚಿಸಲಾಗುವುದು. ಸಮಿತಿ ನೀಡುವ ವರದಿಯ ಆಧಾರದ ಮೇಲೆ ಅಗತ್ಯ ಅನುದಾನ ನೀಡುವುದರ ಮೂಲಕ ಅತ್ಯಂತ ಹಿಂದುಳಿದ, ಅತಿ ಹಿಂದುಳಿದ ಮತ್ತು ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಕ್ರಮಕೈಗೊಳ್ಳಲಾಗುವುದು. ಈ ಮೂಲಕ ತಾರತಮ್ಯ ತಗ್ಗಿಸಲು ನಮ್ಮ ಸರಕಾರ ಕ್ರಮ ಕೈಗೊಳ್ಳಲಿದೆ. ಅಲ್ಲಿಯವರೆಗೆ ನಮ್ಮ ಸರಕಾರ ಡಿ.ಎಂ. ನಂಜುಂಡಪ್ಪ ವರದಿ ಅನುಸಾರ ಈ ವರ್ಷ 3 ಸಾವಿರ ಕೋಟಿ ರೂ.ಗಳನ್ನು ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ವಿನಿಯೋಗಿಸಲಿದೆ ಎಂದರು.

ಉತ್ತರ ಕರ್ನಾಟಕವು ಸಮೃದ್ಧ ಪ್ರವಾಸೋದ್ಯಮಗಳ ತಾಣವಾಗಿದೆ. ಐತಿಹಾಸಿಕ ಮಹತ್ವವಿರುವ ಈ ತಾಣಗಳು ಅಂತಾರಾಷ್ಟ್ರೀಯವಾಗಿಯೂ ಮಹತ್ವ ಪಡೆದಿವೆ. ಆದರೆ ಇದಕ್ಕೆ ಸಾಕಷ್ಟು ಮಹತ್ವ ನೀಡದೆ ಹಿನ್ನಡೆಯನ್ನು ಅನುಭವಿಸುತ್ತಿದೆ. ನಾವು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸಮಗ್ರ ಕ್ರಿಯಾಯೋಜನೆಯನ್ನು ರೂಪಿಸಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಕ್ರಮವಹಿಸುತ್ತೇವೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯ ಜಿಲ್ಲೆಗಳಲ್ಲಿ ಖಾಲಿಯಿರುವ ಎಲ್ಲಾ ಹುದ್ದೆಗಳನ್ನು ನಮ್ಮ ಸರ್ಕಾರ ತುಂಬಲಿದೆ. ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ 371(ಜೆ) ಸೌಲಭ್ಯ ಸಿಗುವಂತೆ ಮಾಡಿದ್ದು ನಾವು. ಸದರಿ ಸೌಲಭ್ಯದಿಂದ ಉದ್ಯೋಗ, ಶಿಕ್ಷಣದಲ್ಲಿ ಅನೇಕ ಸೌಲಭ್ಯಗಳನ್ನು ಈ ಭಾಗದ ಯುವಕರು-ವಿದ್ಯಾರ್ಥಿಗಳು ಪಡೆದುಕೊಂಡು ವಿವಿಧ ಹುದ್ದೆ ಗಿಟ್ಟಿಸಿರುವುದನ್ನು ಸಿಎಂ ಸದನದಲ್ಲಿ ಪ್ರಸ್ತಾಪಿಸಿದರು.

# ಪಾಲಕರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಿ




■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮಕ್ಕಳು ಈ ದೇಶದ ಆಸ್ತಿ. ಅವರ ರಕ್ಷಣೆ ನಮ್ಮೆಲ್ಲರ ಹೊಣೆ. ಇತ್ತೀಚೆಗೆ ಹೆಣ್ಣು ಭ್ರೂಣಹತ್ಯೆಯ ಕುರಿತು ವರದಿಯಾಗುತ್ತಿರುವುದು ಕಳವಳ ಮತ್ತು ಆತಂಕಕಾರಿ ಸಂಗತಿ. ಅಂತವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. ಬಾಲ್ಯ ವಿವಾಹದಂತಹ ಪ್ರಕರಣಗಳು ಕಂಡುಬಂದಲ್ಲಿ ಇಲಾಖೆಯ ಗಮನಕ್ಕೆ ತರಬೇಕು ಎಂದು ಮಕ್ಕಳ ರಕ್ಷಣಾಧಿಕಾರಿ ಮಲ್ಲಪ್ಪ ಹೊಸಳ್ಳಿ ಹೇಳಿದರು.

ಅವರು ಸಮೀಪದ ಅಡರಕಟ್ಟಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ, ಮಹಿಳಾ ಸಮಾಖ್ಯ ಕರ್ನಾಟಕ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಗದಗ ಜಿಲ್ಲಾ ಘಟಕ) ಅಡಿಯಲ್ಲಿ 2023-24ನೇ ಸಾಲಿನ ಪ್ರಥಮ ಸುತ್ತಿನ ಮಕ್ಕಳ ಗ್ರಾಮಸಭೆಯಲ್ಲಿ ಮಾತನಾಡಿ, ಗ್ರಾ.ಪಂಗಳಿಂದ ಶಾಲೆಗಳಿಗೆ ಬೇಕಾಗುವ ಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಲಾಗುವುದು. ಪಾಲಕರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಎಂದರು.

ಸಭೆಯಲ್ಲಿ ಹಲವಾರು ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ, ಆರೋಗ್ಯ, ಸ್ವಚ್ಛತೆ ಇತ್ಯಾದಿಗಳ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿ ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಿಗಳಿಗೆ ತಿಳಿಸಿರು. ನಂತರ ಮಾತನಾಡಿದ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಸವಿತಾ ಸೋಮಣ್ಣನವರ, ವಿದ್ಯಾರ್ಥಿಗಳ ಬೇಡಿಕೆ ಮತ್ತು ಸಮಸ್ಯೆಗಳನ್ನು ಆದಷ್ಟು ಬೇಗ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಸಭೆಯ ಅಧ್ಯಕ್ಷತೆಯನ್ನು ಗ್ರಾ.ಪಂ ಅಧ್ಯಕ್ಷೆ ಪ್ರೇಮಕ್ಕ ಲಮಾಣಿ ವಹಿಸಿಕೊಂಡಿದ್ದರು. ಸಭೆಯಲ್ಲಿ ಸಿಟಿಆರ್ ಉಮಾಭಾರತಿ, ಮಹಿಳಾ ಸಮಾಖ್ಯ ಅಧಿಕಾರಿ ಹೇಮಾವತಿ, ಹೀರೆಮಠ, ಎಸ್.ಎಚ್. ಉಮಚಗಿ, ಎಂ.ಎಸ್. ಹೀರೆಮಠ, ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತೆಯರು, ಮಕ್ಕಳು ಭಾಗವಹಿಸಿದ್ದರು. ಡಿ.ಡಿ. ಲಮಾಣಿ ನಿರೂಪಿಸಿದರು. ಎಂ.ಎಸ್. ಹೀರೆಮಠ ವಂದಿಸಿದರು.

# ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳಿ



■ವಿಜಯಸಾಕ್ಷಿ ಸುದ್ದಿ, ಗದಗ

ಮಹಿಳೆಯರು ತಮ್ಮ ಮನೆಯ ದಿನನಿತ್ಯದ ಕಾರ್ಯಗಳನ್ನು ಪೂರೈಸಿ, ಬಿಡುವಿನ ವೇಳೆಯಲ್ಲಿ ಟೇಲರಿಂಗ್ ಕಲಿಯಬಹುದು. ಸ್ವಯಂ ಉದ್ಯೋಗ ಕೈಗೊಳ್ಳಲು ಬ್ಯಾಂಕ್‌ಗಳಿಂದ ಆರ್ಥಿಕ ನೆರವು ಸಹ ದೊರೆಯಲಿದೆ. ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳುವ ಮೂಲಕ ಆರ್ಥಿಕವಾಗಿ ಮುನ್ನಡೆ ಸಾಧಿಸಬೇಕೆಂದು ಜಯಶ್ರೀ ಹಿರೇಮಠ ಹೇಳಿದರು.

ಅವರು ಗುರುವಾರ ಮುಂಡರಗಿಯ ಕೆ.ಸಿ.ಸಿ ಬ್ಯಾಂಕ್‌ನ ಸಭಾಂಗಣದಲ್ಲಿ ಔಟ್ ರೀಚ್ ಸಂಸ್ಥೆಯು ಮುಂಡರಗಿ ತಾಲೂಕಿನ ವಿವಿಧ ಗ್ರಾಮಗಳ ಮಹಿಳಾ ಸ್ವ-ಸಹಾಯ ಸಂಘಗಳ ಮಹಿಳೆಯರಿಗೆ ಏರ್ಪಡಿಸಿದ್ದ ಒಂದು ದಿನದ ಟೇಲರಿಂಗ್ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ನಿರುದ್ಯೋಗಿ ಮಹಿಳೆಯರು, ಸ್ವಯಂ ಉದ್ಯೋಗ ಕೈಗೊಳ್ಳಲು ಆಸಕ್ತರಾದವರಿಗೆ ಏರ್ಪಡಿಸಿರುವ ಈ ತರಬೇತಿಯ ಸದುಪಯೋಗವನ್ನು ಎಲ್ಲ ಮಹಿಳೆಯರು ಪಡೆದುಕೊಳ್ಳಬೇಕು ಎಂದ ಅವರು, ಹೊಸದಾಗಿ ಟೇಲರಿಂಗ್ ವೃತ್ತಿ ಆರಂಭಿಸಲಿರುವ ಮಹಿಳೆಯರಿಗೆ ಮಾಹಿತಿ ನೀಡಿದರು.

ಬಟ್ಟೆ ಕತ್ತರಿಸುವ ವಿಧಾನ, ಹೊಲಿಯುವ ಬಗೆ, ಅಚ್ಚುಕಟ್ಟಾಗಿ ಹಾಗೂ ಫ್ಯಾಶನೇಬಲ್ ಆಗಿ ಅಂದವಾಗಿ ಕಾಣುವಂತೆ ಹೊಲಿಯುವ ಬಗೆಯನ್ನು ಮಹಿಳೆಯರಿಗೆ ಮನದಟ್ಟಾಗುವಂತೆ ವಿವರಿಸಿದರಲ್ಲದೆ ತರಬೇತಿಯ ಶಿಬಿರಾರ್ಥಿಗಳ ಸಂದೇಹಗಳಿಗೆ ಉತ್ತರಿಸಿದರು.

ಮುಂಡರಗಿ ತಾಲೂಕಿನ ಕಲಕೇರಿ, ಬಿಡನಾಳ, ಬಾಗೇವಾಡಿ, ಮುಷ್ಠಿಕೊಪ್ಪ, ಹಳ್ಳಿಗುಡಿ, ಪೇಠಾಲೂರ, ಅತ್ತಿಕಟ್ಟಿ, ಡೋಣಿ, ಜಂತ್ಲಿ ಮುಂತಾದ ಗ್ರಾಮೀಣ ಪ್ರದೇಶಗಳಿಂದ ಸುಮಾರು 100ಕ್ಕೂ ಹೆಚ್ಚು ಮಹಿಳೆಯರು ಈ ಹೊಲಿಗೆ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾಹಿತಿ ಪಡೆದುಕೊಂಡರು.

ಔಟ್ ರಿಚ್ ಸಂಸ್ಥೆಯ ಜಿಲ್ಲಾ ಸಂಯೋಜಕ ಲೋಹಿತಕುಮಾರ ವ್ಹಿ.ಕಾಸಾರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆಯ ಸಿಬ್ಬಂದಿಗಳಾದ ಈರಣ್ಣ ಬಳಿಗೇರ, ರಾಕೇಶ ಕದಾಂಪೂರ ಮುಂತಾದವರಿದ್ದರು.

### ಶ್ರೀ ದ್ಯಾಮವ್ವ ದೇವಿ ಕಳಸಾರೋಹಣ ಸಮಾರಂಭದಲ್ಲಿ ದತ್ತಾವಧೂತ ಶ್ರೀಗಳು

# ಮಹತ್ವಾಕಾಂಕ್ಷೆ ಮನುಷ್ಯನನ್ನು ಕುರುಡನನ್ನಾಗಿಸಿದೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮನುಷ್ಯನಲ್ಲಿ ಇನ್ನಿಲ್ಲದ ಮಹತ್ವಾಕಾಂಕ್ಷೆ ಅವನನ್ನು ಕುರುಡ ನನ್ನಾಗಿಸಿದೆ. ಹೀಗಾಗಿ ಅವನಿಗೆ ಜಗತ್ತಿನ ಸೌಂದರ್ಯವೇ ಕಾಣುತ್ತಿಲ್ಲ. ಸದಾ ಅಹಂಕಾರದಲ್ಲಿಯೇ ಮುಳುಗಿರುವ ಮನುಷ್ಯ ಸಂಬಂಧಗಳನ್ನು ಮರೆಯುತ್ತಿದ್ದಾನೆ ಮತ್ತು ಜೀವನದ ಸ್ವಾರಸ್ಯವನ್ನು ಕಳೆದುಕೊಳ್ಳುತ್ತಿದ್ದಾನೆ ಎಂದು ಹೆಬ್ಬಳ್ಳಿ ಚೈತನ್ಯಾಶ್ರಮದ ಪ.ಪೂ. ಶ್ರೀ ದತ್ತಾವಧೂತ ಮಹಾರಾಜರು ನುಡಿದರು.

ಪಟ್ಟಣದ ಶ್ರೀ ದ್ಯಾಮವ್ವ ದೇವಿ ಕಳಸಾರೋಹಣ ಸಮಾರಂಭದ ನೇತೃತ್ವ ವಹಿಸಿ ಅವರು ಆಶೀರ್ವಚನ ನೀಡಿದರು.

ಸಂಸಾರದಲ್ಲಿ ಸುಖವಿದೆ ಎಂದು ಹೇಳಿಕೊಂಡು ತಿರುಗುವವನು ಮೂರ್ಖ. ಮನುಷ್ಯನಿಗೆ ಸಮಾಧಾನವೇನಾದರೂ ಸಿಗುವಂತಿದ್ದರೆ ಅದು ಭಗವಂತನ ಸ್ಮರಣೆಯಲ್ಲಿ ಮಾತ್ರ.



ದೇವಸ್ಥಾನಗಳು ಮನುಷ್ಯನಲ್ಲಿ ಆಧ್ಯಾತ್ಮಿಕ ಚಿಂತನೆಯನ್ನು ಬೆಳೆಸುವ ಶ್ರದ್ಧಾ ಕೇಂದ್ರಗಳು. ಮನುಷ್ಯನಲ್ಲಿನ ಭಾವನೆಯಂತೆ ಭಗವಂತ ಪ್ರಕಟನಾಗುತ್ತಾನೆ. ಬುದ್ಧಿಯ ದಿಕ್ಕನ್ನು ಬದಲಿಸುವ ಶಕ್ತಿ ಸಾಧು-ಸತ್ಪುರುಷರಲ್ಲಿರುತ್ತದೆ. ಅವರ ಭೇಟಿ, ದರ್ಶನಾಶೀರ್ವಾದದಿಂದ ಮುಕ್ತಿಯನ್ನು ಪಡೆಯಬಹುದು ಎಂದರು.

ಮುರನಾಳದ ಶ್ರೀ ಮಳೆರಾಜೇಂದ್ರ ಸ್ವಾಮಿಮಠದ ಶ್ರೀ ಜಗನ್ನಾಥ ಸ್ವಾಮೀಜಿ ಆಶೀರ್ವಚನ ನೀಡಿ, ಮನುಷ್ಯನಿಗೆ ಶಿವಕಾರುಣ್ಯವಾದಾಗಲೇ ಅವನ ಜೀವನ ಪಾವನವಾಗುತ್ತದೆ. ನೀತಿ, ಕ್ರಿಯೆ, ಆಚರಣೆ ಈ ತ್ರಿಕರ್ಣಪೂರ್ವಕ ಪೂಜೆ ಮಾಡಿದಾಗ ಭಗವಂತ ಒಲಿಯುತ್ತಾನೆ. ಮಂತ್ರದಿಂದ ಅಂತರಂಗ ಶುದ್ಧಿಯಾಗುತ್ತದೆ. ಭಗವದ್ಗೀತೆಯು ಭಾರತೀಯ ಸಂಸ್ಕೃತಿ ತಿಳಿಸುವ ಸಮಗ್ರ ಗ್ರಂಥವಾಗಿದೆ. ಅದರ ಅಧ್ಯಯನ ಮಾಡುವ ಮೂಲಕ ಜೀವನವನ್ನು ಪಾವನ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕಳಸಾರೋಹಣ ಸಮಿತಿಯ ಅಧ್ಯಕ್ಷ ಬಾಳಪ್ಪ ಸೋಮಗೊಂಡ ವಹಿಸಿದ್ದರು. ಅಪೇಕ್ಷಾ ಕುರಂದವಾಡ ಪ್ರಾರ್ಥಿಸಿದರು. ಅನ್ನಪೂರ್ಣಾ ರಾಚನಗೌಡರ ಭಕ್ತಿ ಗೀತೆ ಹಾಡಿದರು. ಕೆ.ಎಮ್. ಸೋಮಗೊಂಡ ಸ್ವಾಗತಿಸಿದರು. ಸುನೀಲ ಅಂಬೇಕರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಆರ್.ಜಿ. ಪಾಟೀಲ ವಂದಿಸಿದರು.

ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ನರೇಗಲ್ಲ ಹಿರೇಮಠದ ಷ.ಬ್ರ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಆಶೀರ್ವಚನ ನೀಡಿ, ಜಗತ್ತಿನ ಸೃಷ್ಟಿಗೆ ಕಾರಣವೇ ಜಗನ್ಮಾತೆ. ಮಹಾಕಾಳಿ, ಮಹಾಸರಸ್ವತಿ ಮತ್ತು ಮಹಾಲಕ್ಷ್ಮಿಯ ರೂಪದಲ್ಲಿ ದೇವಿಯ ಆರಾಧನೆಯನ್ನು ಮಾಡಲಾಗುತ್ತಿದೆ. ನರೇಗಲ್ಲ ಮತ್ತು ಮಜಿರೆ ಗ್ರಾಮಗಳ ಎಲ್ಲ ಸದ್ಭಕ್ತರು ದೇವಿಯ ಆರಾಧನೆಯನ್ನು ಐದು ದಿನಗಳ ಕಾಲ ಅತ್ಯಂತ ಶ್ರದ್ಧಾ ಭಕ್ತಿಗಳಿಂದ ನೆರವೇರಿಸಿದ್ದು, ಖಂಡಿತವಾಗಿಯೂ ದೇವಿಯು ಎಲ್ಲರಿಗೂ ಒಳಿತನ್ನು ಮಾಡುತ್ತಾಳೆ ಎಂದರು.

# ಗ್ರಾಮೀಣ ಅಂಚೆ ನೌಕರರ ಮುಷ್ಕರ ನಾಲ್ಕನೇ ದಿನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಗ್ರಾಮೀಣ ಅಂಚೆ ನೌಕರರ ಮುಷ್ಕರವು ನಾಲ್ಕನೇ ದಿನವಾದ ಶುಕ್ರವಾರವೂ ಮುಂದುವರೆಯಿತು. ರೋಣ ಉಪ ಅಂಚೆ ಕಚೇರಿಯೆದುರು ಸುಮಾರು 250ಕ್ಕೂ ಗ್ರಾಮೀಣ ಅಂಚೆ ನೌಕರರು ಮುಷ್ಕರದಲ್ಲಿ ಪಾಲ್ಗೊಂಡರು.

ಈ ಸಂದರ್ಭದಲ್ಲಿ ಗದಗ ವಿಭಾಗೀಯ ಕಾರ್ಯದರ್ಶಿ ಎಂ.ಎನ್. ಮಾತನಾಡಿ, ನಮ್ಮ ಬೇಡಿಕೆಗಳಾದ 8 ಗಂಟೆಗಳ ಕೆಲಸ ನೀಡುವುದು, ಪಿಂಚಣಿ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ನೀಡುವುದು, ಸೇವಾ ಹಿರಿತನದ ಆಧಾರದ ಮೇಲೆ 12/24/36 ಸೇವೆ ಸಲ್ಲಿಸಿದ




ಜಿಡಿಎಸ್ ನೌಕರರಿಗೆ ವಿಶೇಷ ಇಂಕ್ರಿಮೆಂಟ್ ನೀಡುವುದು, ಗ್ರುಪ್ ಇನ್ಸುರೆನ್ಸ್ ಕವರೇಜ್ ರೂ. 5 ಲಕ್ಷದವರೆಗೆ ಹೆಚ್ಚಿಸುವುದು, ಅವೈಜ್ಞಾನಿಕ ಗುರಿ ಸಾಧಿಸಿರುವ ಜಿಡಿಎಸ್ ನೌಕರರಿಗೆ ನೀಡುತ್ತಿರುವ ಕಿರುಕುಳವನ್ನು ನಿಲ್ಲಿಸುವುದು, ಜಿಡಿಎಸ್ ಗ್ರಾಚುವಿಟ್ ಹಣವನ್ನು ರೂ. 5 ಲಕ್ಷದವರೆಗೆ ಹೆಚ್ಚಿಸುವುದು, 180 ದಿನಗಳ ರಜೆ ಉಳಿಸಿಕೊಳ್ಳಲು ಅವಕಾಶ ಕಲ್ಪಿಸುವುದು ಇವೇ ಮುಂತಾದ ಬೇಡಿಕೆಗಳನ್ನು ಶೀಘ್ರ ಈಡೇರಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರೋಣ ಭಾಗದ ಗ್ರಾಮೀಣ ಅಂಚೆ ನೌಕರರಾದ ಅನ್ನಪೂರ್ಣ ಮಾದರ್, ಗುರುಬಸಮ್ಮ ಅಂಗಡಿ, ಪ್ರತಿಭಾ ಗೌಡಪ್ಪನವರ್, ಶಾರದಾ ಅಸೂಟಿ, ಚೇತನ್ ಕುಲಕರ್ಣಿ, ಆರ್.ಆರ್. ಮಾಂಡ್ರೆ, ಪಿ.ವಿ. ಇಟ್ಟಂಗಿ, ದಿವ್ಯ ಭಾರತಿ ಕೊರವರ್, ಸಾವಿತ್ರಿ ನೀಲಣ್ಣವರ್, ಎಸ್.ಡಿ. ಪತ್ತಾರ್ ಸೇರಿದಂತೆ ವಿಭಾಗ ಮಟ್ಟದ ಎಲ್ಲಾ ಗ್ರಾಮೀಣ ಅಂಚೆ ನೌಕರರು ಹಾಜರಿದ್ದರು.

# ವಿಶೇಷ ಚೇತನ ಮಕ್ಕಳಿಗೆ ಸಾಧನ-ಸಲಕರಣೆ ವಿತರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ವಿಶೇಷ ಚೇತನ ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬಿ ಅವರನ್ನು ಮಾನಸಿಕವಾಗಿ ಪ್ರಬುದ್ಧಗೊಳಿಸಿ ಮುಖ್ಯವಾಹಿನಿಗೆ ತರಬೇಕಾದಲ್ಲಿ ಸಮುದಾಯದ ಸಹಭಾಗಿತ್ವ ಅಗತ್ಯ ಎಂದು ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಬುರಡಿ ಹೇಳಿದರು.

ಅವರು ಶುಕ್ರವಾರ ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಿಂದ ವಿಶೇಷ ಚೇತನ ಮಕ್ಕಳಿಗೆ ಸಾಧನ-ಸಲಕರಣೆ ವಿತರಿಸಿ ಮಾತನಾಡಿದರು.

ಅಂಗವೈಕಲ್ಯತೆ ಮೆಟ್ಟಿನಿಂತು ಸಾಧನೆ ಮಾಡಿದ ಸಾಧಕರನ್ನು ನಾವು ಮಾದರಿಯಾಗಿಟ್ಟುಕೊಂಡು ಮುನ್ನಡೆಯಬೇಕು. ಪಾಲಕರು-ಪೋಷಕರು ಈ ಮಕ್ಕಳು ಉನ್ನತ



ಶಿಕ್ಷಣ ಪಡೆದು ಸ್ವಾವಲಂಬಿಗಳಾಗುವಂತೆ ಪ್ರೇರಣೆ ನೀಡಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಪನ್ಮೂಲ ವ್ಯಕ್ತಿ ಕೆ.ಎಸ್. ಬೇಲೇರಿ, ವಿಶೇಷ ಚೇತನ ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಸರಕಾರ ನೀಡುವ ಎಲ್ಲ ಸೌಲಭ್ಯಗಳನ್ನು ಈ ಮಕ್ಕಳಿಗೆ ತಲುಪಿಸಲಾಗಿದ್ದು ಇವುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಫೋರ್ಥ್ ವೇ ಫೌಂಡೇಶನ್‌ನ ಬಸವರಾಜ ಮ್ಯಾಗೇರಿ, ಸಿಆರ್‌ಪಿ ಖಲೀದ್ ಜಲಗೇರಿ, ಎ.ಆರ್. ನದಾಫ ಮುಂತಾದವರಿದ್ದರು.

ಶಶಿಧರ ಚಳಗೇರಿ ಸ್ವಾಗತಿಸಿ ವಂದಿಸಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka